(ಅನುಬಂಧ-3)

II ವಿಧೇಯಕಗಳನ್ನು ಪರ್ಯಾಲೋಚನೆ ಹಾಗೂ ಅಂಗೀಕಾರ
ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ

(ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014,

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು): ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ,ನಿವೃತ್ತಿ ವೇತನ ಮತ್ತು ಇತರಸೌಲಭ್ಯಗಳ ನಿಯಂತ್ರಣ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು: ವಿಧೇಯಕದ ಕುರಿತು ವಿವರಣೆ ನೀಡಿ,

ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಮತ್ತು ಪ್ರವಾಸೋಧ್ಯಮ ಸಚಿವರು): ಮಾನ್ಯ, ಅಧ್ಯಕ್ಷರೆ, ಹಲವಾರು ಖಾಸಗಿ ಸಂಸ್ಥೆಗಳಿಗೆ ಸರ್ಕಾರ Grant - in - aid ಕೊಡುತ್ತಾ ಬಂದಿದೆ. ಈ Grant - ın - aid ಮುಂಚೆ ಕೊಡುವಾಗ ಮುಖ್ಯವಾಗಿ managementಗೆ maintenance ಗೆಂದು ಹೋಗುತ್ತಿತು. ಅದರ ನಂತರ 1977ನೇ ಇಸವಿಯಲ್ಲಿ ತಮಗೆ ಸರಿಯಾದ ಸಮಯಕ್ಕೆ ಸಂಬಳ ಸಿಗುವುದಿಲ್ಲ, ಎಲ್ಲಾ ಸಂಬಳ ನಮ್ಮ ಕೈಗೆ ಬರುತ್ತಿಲ್ಲ. ಹಲವಾರು ಶಿಕ್ಷಕರು ಸರ್ಕಾರದ ಗಮನಕ್ಕೆ ತಂದರು. ಹಾಗಾಗಿ ನೇರವಾಗಿ ಕೊಡುವ ಪ್ರಕ್ರಿಯೆ ಶುರುವಾಯಿತು. ನಿಮ್ಮ ಸರ್ಕಾರ ಇದ್ದಾಗ, ಇದರ ಹಿಂದಿನ ಸರ್ಕಾರಗಳು ಇದ್ದಾಗ, ಈಗ ನಮ್ಮ ಸರ್ಕಾರದಲ್ಲೂ ಇದು ಮುಂದು

ವರೆಯುತ್ತಿದೆ. ನಾವು prospective ಆಗಿ Grant - in - aid ಕೊಡುತ್ತೇವೆ. ಉದಾಹರಣೆಗೆ ಹೇಳುವುದಾದರೆ, ಈಗ ಒಂದು ಸಂಸ್ಥೆ 1990ನೇ ಇಸವಿಯಲ್ಲಿ ಪ್ರಾರಂಭವಾಗಿರಬಹುದು. ಆದರೆ Grant - in - aid ಗೆ ಅದು ಇವತ್ತು ಒಳಪಟ್ಟರೆ ಅದನ್ನು ಇವತ್ತಿನಿಂದ ಕೊಡುತ್ತೇವೆ. ಆ ತರಹದ benefit ಅನ್ನು ನಾವು ಕೊಡುತ್ತಾ ಬಂದೆವು. ಆದರೆ ಕೆಲವು ಶಿಕ್ಷಕರು ಈ Grant - in -aid ಅಥವಾ service conditions, pensionಗೆ ಯಾವಾಗ ಅವರು service ನಲ್ಲಿ ಸೇರಿದರೂ, ಆ ಸಮಯದಿಂದ ಕೊಡಬೇಕೆಂದು ಹೈಕೋರ್ಟಿಗೆ Writ Appeal ಹೋದರು ನಂತರ ಸುಪ್ರೀಂ ಕೋರ್ಟಿಗೂ ಹೋದರು. ನಾವೂ ಸುಪ್ರೀಂ ಕೋರ್ಟಿಗೆ ಹೋದೆವು. 24.03.2000 ದ ಒಂದು ಆದೇಶದ ಪ್ರಕಾರ ಸರ್ಕಾರ ಈ ತರಹ ಆದರೆ ಸರಿಯಲ್ಲ, ಇದರಿಂದ ಸರ್ಕಾರಕ್ಕೆ ಬಹಳ ತೊಂದರೆಯಾಗುತ್ತದೆ ಎಂದು ಅದನ್ನು withdraw ಮಾಡಿದರು. ಈ order ಅನ್ನು challenge ಮಾಡಿ, ಈ Writ Petitions ಮುಖಾಂತರ ಅವರು ಸುಪ್ರೀಂ ಕೋರ್ಟಿಗೆ ಹೋದ ನಂತರ, ಸುಪ್ರೀಂ ಕೋರ್ಟಿನವರು ಈ ಒಂದು ಆದೇಶ ಮಾಡಿದ್ದಾರೆ. ಆ ಆದೇಶದ ಪ್ರಕಾರ ಇವತ್ತು ಸರ್ಕಾರ Grant - in - aid , ಅಂದರೆ ಸಂಬಳ ಇರಬಹುದು, pensions ಇರಬಹುದು, Service Count ಮಾಡುವುದು ಇರಬಹುದು, ಯಾವ ದಿವಸದಿಂದ ನಾವು Grant-in-aid ಒಳಪಡಿಸಿದ್ದೇವೋ, ಆ ದಿನಾಂಕದಿಂದ ಅಲ್ಲ, ಯಾವಾಗ ಅವರು service ಗೆ join ಆದರೋ, ಆ ದಿನದಿಂದ ಕೊಡಬೇಕಾಗಿದೆ. ಆದರೆ ನಮ್ಮ Karnataka Education Act 1983ನಲ್ಲಿ ಈ ರೀತಿ ಹೇಳಲಾಗಿದೆ. ಇದನ್ನು 1983ಯಲ್ಲಿ ತಂದರು, ಆದು 1995ರಲ್ಲಿ ಜಾರಿಗೆ ಬಂತು. ಅದರಲ್ಲಿ Section 145ರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ,

(1) The Karnataka Compulsory Primary Education Act,1961(Karnataka Act 9 of 1961) and the Karnataka Private Educational Institutions (Discipline and control) Act , 1975 (Karnataka Act 10 of 1975) are hereby repealed.

(2) Notwithstanding such repeal , any Act or thing done under the said Act shall be deemed to have been done under this Act and may be continued and completed under the corresponding provisions of this Act .'

ಇದರ ಮುಂದೆ ಏನು ಹೇಳುತ್ತಾರೆ ಎಂದರೆ, ಈ Act ಕೆಳಗೆ Rule making power ಕೊಟ್ಟು rule ಪ್ರಕಾರ ನಾವು Grant - in - aid extend ಮಾಡಬೇಕೆಂದು ನಿರ್ಣಯವಾಯಿತು. ಆ ಪ್ರಕಾರ Rule 3 ಏನು ಹೇಳುತ್ತದೆ ಎಂದರೆ,

'Standard staffing pattern for primary schools : - The minimum strength that is . . . . '

ಈ ರೀತಿಯಾಗಿ ಇದರಲ್ಲಿ details ಕೊಟ್ಟಿದ್ದಾರೆ. ಇದರಲ್ಲಿ ಮುಂದುವರೆದು ಈ ರೀತಿ ಹೇಳಿದ್ದಾರೆ " Further in a primary School which has classes from 1 to VII , if the number of students in each class is less than 40 - 45 for a primary education shall be sanctioned for minimum total student of hundred'. ಆ ಪ್ರಕಾರ ರೂಲ್ಸ್ 3 . . Supreme Court ನವರು ಆದೇಶವೊಂದನ್ನು ಮಾಡಿದ್ದಾರೆ. ಆ ಆದೇಶದ ಪ್ರಕಾರ ನಾವು ಮತ್ತು ನೀವು ಇದ್ದಾಗ ಸರ್ಕಾರದಿಂದ ಏನು Grant - in - aid prospective ಆಗಿ ಕೊಟ್ಟಿದ್ದೇವೋ, ಅದು ಈಗ from the date they have joined service ಎಂದು ಆಗಿದೆ. ಇದು intention ಸರ್ಕಾರದ್ದು ಇರಲಿಲ್ಲ.

Rule 3 : - Extend of benefits not admissible to the extent of the employee of their institution . Benefits are available for the services rendered during the un - aided period for purpose of fixation of pay , leave and pension or any other service benefits by the Government . ' ಯಾರು institution ನಲ್ಲಿ ಇವತ್ತು aided teacher ಆಗಿ service ಮಾಡಿಲ್ಲ, ಆ period aided service ಎಂದು treat ಮಾಡಲಿಕ್ಕೆ ಬರುವುದಿಲ್ಲ ಎಂದು ರೂಲ್ಸ್‌ನಲ್ಲಿ ಸ್ಪಷ್ಟವಾಗಿದೆ. ಹಾಗಾಗಿ ಇವತ್ತು ಏನಾಗಿದೆ ಎಂದರೆ, ಸರ್ಕಾರ ಯಾವುದೇ benefits ಹಿಂದೆ ತೆಗೆದುಕೊಂಡಿಲ್ಲ. ಸರ್ಕಾರಗಳು Grant - in - aid ಪಕಾರ ಏನು aid ಕೊಟ್ಟಿದ್ದಾರೆ, Salary ಇರಬಹುದು, increments ಇರಬಹುದು, prospective ಆಗಿ ಅದು ಯಾವುದನ್ನೂ ನಾವು Withdraw ಮಾಡಿಲ್ಲ. ಸರ್ಕಾರದಿಂದ ಯಾವ ಶಿಕ್ಷಕರಿಗೂ ತೊಂದರೆಯಾಗಿಲ್ಲ. ಆರ್ಥಿಕವಾಗಿಯೂ ತೊಂದರೆಯಾಗಿಲ್ಲ ಯಾವುದೇ ತೊಂದರೆಯಾಗುವ ಪ್ರಶ್ನೆ ಇಲ್ಲ. ಇಲ್ಲಿರುವ ಪ್ರಶ್ನೆ ಏನೆಂದರೆ, ನೀವು ಹೇಳುವುದು ಈಗ retrospective ಆಗಿ ಕೊಡಿ. For example ನಾನು ಹೇಳುತ್ತೇನೆ. Suppose ಒಬ್ಬ ಶಿಕ್ಷಕ 1989ನಲ್ಲಿ join ಆಗಿದ್ದಾನೆ, 2004ನೇ ಇಸವಿಯಲ್ಲಿ ಅವರ ಸಂಸ್ಥೆಗೆ Grant - in - aid ಕೊಟ್ಟಿದೆ. ಇವರು ಹೇಳುವುದು ಏನೆಂದರೆ, ನಾನು ಆ ಸಂಸ್ಥೆಯಲ್ಲಿ 1989ರಲ್ಲೇ join ಆಗಿದ್ದೇನೆ, aided institution ಎಂದು 2004ರಲ್ಲಿ ಆಗಿರಬಹುದು, ನನಗೆ 14 ವರ್ಷಗಳ arrears ಕೊಡಿ, pension benefits ಕೊಡಿ ಮತ್ತು ಇತರ service , fixation of scale ಕೊಡಿ ಎಂದು ಕೇಳುತ್ತಿದ್ದಾರೆ. ಈ ಪ್ರಕಾರ ಮಾಡುತ್ತಾ ಹೋದರೆ, ಇವತ್ತು ಭಾರ ಎಷ್ಟು ಬರುತ್ತದೆ ಎಂದರೆ, ಯಾರಿಗೆ ಈಗ 26,600 ರೂ.ಗಳ salary ಸಿಗುತ್ತಿದೆಯೋ, ಅವನಿಗೆ ಈಗ ಸರ್ಕಾರ 55,000 ರೂ. ಗಳ salary ಕೊಡಬೇಕಾಗುತ್ತದೆ. Primary Education ಮೇಲೆ 4200 ಕೋಟಿ ರೂ.ಗಳ financial burden

ಬೀಳಬಹುದು. Higher Education ಲೆಕ್ಕಕ್ಕೆ ತೆಗೆದುಕೊಂಡರೆ 150–200 ಕೋಟಿ ರೂ.ಗಳ ಆರ್ಥಿಕ ಹೊರೆ ಆಗಬಹುದು. ಹಾಗಾಗಿ ಇಲ್ಲಿ ಪ್ರಶ್ನೆ ಏನೆಂದರೆ, ಯಾರೋ ಒಬ್ಬ ಶಿಕ್ಷಕರಿಗೆ ಇವತ್ತಿನ ತನಕ Grant - in - aid ಜಾರಿಗೆ ಬಂದ ನಂತರ, ಯಾವ ಶಿಕ್ಷಕರಿಗೆ ನಾವು ಇಲ್ಲಿ deprive ಮಾಡಿದ್ದರೆ, they have a right. ಆದರೆ ಅದು ಯಾವುವನ್ನೂ ನಾವು ಅವರಿಗೆ deprive ಮಾಡಿಲ್ಲ. ಏನು ಕಾನೂನು ಪ್ರಕಾರ ಕೊಡಬೇಕೋ, ಅದನ್ನು ಕೊಡುತ್ತಾ ಬಂದಿದ್ದೇವೆ. ಯಾವ ದಿವಸ, ಯಾವ ದಿನ Grant - in aid code ಜಾರಿಗೆ ಬಂತೋ, ಆ ದಿನದಿಂದ ಕೊಡುತ್ತಾ ಬಂದಿದ್ದೇವೆ. ಆದರೆ ಇಲ್ಲಿರುವ ಪ್ರಶ್ನೆ ಏನೆಂದರೆ, ಯಾವಾಗ ಅವರು Grant - in - aid ಕೊಡುವಾಗ ಇರಲಿಲ್ಲವೋ, ಆ ಸಮಯದ್ದನ್ನೂ ಕೊಡಬೇಕೆಂದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ವ್ಯಾಜ್ಯ ಹೂಡಿ, ಹೈಕೋರ್ಟ್‌ನಿಂದ orders ತಂದಿದ್ದಾರೆ. ಹಾಗಾಗಿ ಇವತ್ತು ultimately ಇದು ಜನರ ಹಣ. ಇದರ ಬಗ್ಗೆ ಯಾವುದೇ ಸರ್ಕಾರ, ನಿಮ್ಮ ಸರ್ಕಾರ ಇರಬಹುದು, ನಮ್ಮ ಸರ್ಕಾರ ಇರಬಹುದು, ಬಹಳ ಜವಾಬ್ದಾರಿಯಿಂದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಂದು ವೇಳೆ ಈ ಬಿಲ್ ಪಾಸ್ ಆದರೆ, ಸರಿಯಾದ regulation ಮಾಡಲಿಕ್ಕೆ ಆಗುತ್ತದೆ. ಒಂದು ವೇಳೆ ನಾವು ಈ ಕಾನೂನಿನಿಂದ ಅವರಿಗೆ ಏನು ನಾವು ನ್ಯಾಯಯುತವಾಗಿ ಕೊಟ್ಟಿದ್ದೇವೋ, ಅದನ್ನೇನಾದರೂ ನಾವು ವಾಪಸ್ ತೆಗೆದುಕೊಂಡಿದ್ದರೆ, I can understand. ಅದನ್ನೇನೂ ನಾವು ಮಾಡಿಲ್ಲ. ಅದೆನ್ನೆಲ್ಲಾ ಕೊಟ್ಟಿದ್ದೇವೆ. ಅದರ ನಂತರ in between ಏನೊಂದು orders ಆಯಿತೋ, ಆ ಪ್ರಕಾರ ಅವರಿಗೆ ಆ Grant-ın-aidCode ಪ್ರಕಾರ ಸಂಬಳ ಮತ್ತು pension ಕೊಡುತ್ತಾ ಬಂದಿದ್ದೇವೆ ಈ ಮನೆ ಮುಂದಿರುವ ಒಂದೇ ಪ್ರಶ್ನೆ ಏನೆಂದರೆ, ಏನು ಸರ್ಕಾರ, ಇವತ್ತು ನಮ್ಮ ಸರ್ಕಾರ ಇರಬಹುದು, ಹಿಂದೆ ನಿಮ್ಮ ಸರ್ಕಾರ ಇರಬಹುದು, ಏನು Grant-in-aid Code ಪ್ರಕಾರ, ಅವರಿಗೆ benefits ಕೊಡುತ್ತಾ ಬಂದಿದ್ದೇವೋ,

ಆ benefit ಅನ್ನು ಅವರೇನು retrospective ಆಗಿ ಕೇಳುತ್ತಿದ್ದಾರೆ, ಅದು ಕೊಡುವುದು ಸರಿಯಿಲ್ಲ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ಆ ಪ್ರಕಾರವೇ 1983 Act & Rules ಇದೆ. ಹಾಗಾಗಿ ಸರ್ಕಾರ ಇದನ್ನು ನಾಡಿನ ಹಿತದೃಷ್ಟಿಯಿಂದ ಮತ್ತು ಮುಖ್ಯವಾಗಿ ಆರ್ಥಿಕ ಶಿಸ್ತನ್ನು ತರಲಿಕ್ಕೆ ಮಾಡಿದ್ದೇವೆ. ಈ ಪ್ರಕಾರ ನಾವು ಮಾಡುತ್ತಾ ಹೋದರೆ, ಎಲ್ಲರೂ ಇದೇ ಪ್ರಕಾರ ಮಾಡುತ್ತಾ ಹೋಗಿ ಕಷ್ಟವಾಗಬಹುದು. ಹಾಗಾಗಿ ಇನ್ನು ಮುಂದೆ Grant - in -aid ಇರಬೇಕೋ, ಬೇಡವೋ ಎಂಬ ಬಗ್ಗೆ ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಸಾವಿರಾರು ಕೋಟಿ ₹.ಗಳ Grant - in - aid ಕೊಟ್ಟು, ನಮ್ಮ ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ಸಿಗಬೇಕೆಂದು ಹೇಳಿ, aided institution ಗೆ ನಾವು ಸಹಾಯ ಮಾಡುತ್ತಿದ್ದೇವೆ.

ಏಡೆಡ್ ಇನ್ಸಿಟ್ಯೂಷನ್ ಸರ್ಕಾರದ ಇನ್ಸಿಟ್ಯೂಷನ್ ಆಗಿದ್ದಾವೆ. ಇದರ ಬಗ್ಗೆ ಅವರೊಡನೆ ಚರ್ಚೆನೂ ಮಾಡಿದ್ದೇವೆ, ಆದರೆ ಇತ್ಯರ್ಥವಾಗಿಲ್ಲ. ಹಾಗಾಗಿ ಇವತ್ತು ಈ ಕಾನೂನನ್ನು ನಾವು ತಂದಿದ್ದೇವೆ, ಇಡೀ ಸದನ ನಮ್ಮ ರಾಜ್ಯದ ಹಿತದೃಷ್ಟಿಯಿಂದ, ರಾಜ್ಯದ ಬೊಕ್ಕಸದ ದೃಷ್ಟಿಯಿಂದ ಮತ್ತು ನಮ್ಮ ಶಿಕ್ಷಕರಿಗೆ ಯಾವುದೇ ಅನ್ಯಾಯವಾಗುವುದಿಲ್ಲ ನಾವೇನಾದರು ಕೊಟ್ಟಿದ್ದನ್ನು ವಾಪಸ್ ತೆಗೆದುಕೊಂಡರೆ ಪ್ರಶ್ನೆ ಬರುತ್ತದೆ, ಅದೂ ಆಗುವುದಿಲ್ಲ. ಹಾಗಾಗಿ ಇದಕ್ಕೆ ಮಾನ್ಯತೆ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಸಿರ್ಸಿ) :- ಮಾನ್ಯ ಅಧ್ಯಕ್ಷರೆ, ಕಾಲ್ಪನಿಕ ರೀತಿ ವೇತನ ಸಮಸ್ಯೆ ವಿಷಯ ಇತ್ಯರ್ಥಪಡಿಸುವ ಹಿನ್ನಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ ಇವೆಲ್ಲಾ ಶಿಕ್ಷಣ ಇಲಾಖೆಯ ವ್ಯಾಪ್ತಿ ಬರುವಂತೆ ಈ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ,ನಿವೃತ್ತಿ, ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ

ವಿಧೇಯಕ, 2014 ಅನ್ನು ಸರ್ಕಾರ ಇವತ್ತು ತಂದಿದೆ. ಇದು ಬಹಳ ಕ್ಲಿಷ್ಟಕರವಾದ ಒಂದು ವಿಷಯ, ಇದು ಮೇಲ್ನೋಟಕ್ಕೆ ಸರಳವಾಗಿ ಕಾಣುವಂಥ ವಿಷಯವಲ್ಲ, ಏಕೆಂದರೆ, 1990 ರಿಂದ ಈ ಸಮಸ್ಯೆಗಳು ಪ್ರಾರಂಭವಾಯಿತು. ನಾನು ಅದರ ವಿವರಕ್ಕೆ ಹೋಗುವುದಿಲ್ಲ, ನಾನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವನಾಗಿದ್ದಂಥ ಸಂದರ್ಭದಲ್ಲಿ ನಾನೂ ಸಹ ಸಾಕಷ್ಟು ಬಾರಿ ಇದರ ಬಗ್ಗೆ ವಿಸ್ತಾರವಾಗಿ ಚರ್ಚೆ ಮಾಡಿದ್ದೇನೆ. ಆಗ ಸುಪ್ರೀಂ ಕೋರ್ಟಿನಲ್ಲಿ ಈ ಕೇಸ್ ಇತ್ತು ಆ ಹಿನ್ನೆಲೆಯಲ್ಲಿ ಸೂಕ್ತವಾದ ಒಂದು ನಿರ್ಣಯವನ್ನು ತೆಗೆದುಕೊಳ್ಳುವಂಥ ಒಂದು ಸಂದರ್ಭಗಳು, ಅವಕಾಶಗಳು ಇರಲಿಲ್ಲ. ಈಗ ಸುಪ್ರೀಂ ಕೋರ್ಟಿನ ಏನೊಂದು ನಿರ್ಣಯ ಬಂದಿದೆ. ಅದರ ಹಿನ್ನೆಲೆಯಲ್ಲಿ ಸರ್ಕಾರ ಈ ಒಂದು ಕಾಯಿದೆಯನ್ನು ತರುವುದಕ್ಕೆ ಮುಂದಾಗಿದೆ. 1990ನೇ ಇಸವಿಗಿಂತ ಮೊದಲು ಯಾರಾರು ಕೆಲಸ ಮಾಡಿದ್ದಾರೋ ಅವರು ಈ ರೀತಿಯ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ, ಇದು ನಮಗೂ ನಿಮಗೆಲ್ಲರಿಗೂ ಗೊತ್ತಿದೆ. ದಿನಾಂಕ:4.8.1990 ರಂದು ಸರ್ಕಾರ ಒಂದು ಆದೇಶ ಮಾಡಿರುವ ಹಿನ್ನೆಲೆಯಲ್ಲಿ ಈ ಸಮಸ್ಯೆಗಳು ಪ್ರಾರಂಭವಾಯಿತು. ಅಲ್ಲಿಯವರೆಗೆ ಸಮಸ್ಯೆ ಇರಲಿಲ್ಲ. 1990ಕ್ಕಿಂತ ಮುಂಚೆ ಎಲ್ಲರಿಗೂ ಈ ಸೌಲಭ್ಯವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು : From the date of appointment ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : From the date of appointment , With retrospective effect , ಯಾವತ್ತು grant - in - aid ಗೆ ತಂದಿದೆವಲ್ಲಾ ಅದರ ಹಿಂದಿನ service count ಮಾಡಿ ಅವರಿಗೆ ಕೊಡಬೇಕಾದ ಎಲ್ಲಾ ಸೌಲಭ್ಯಗಳನ್ನು ದಿನಾಂಕ:4.8.1990 ರವರೆಗೆ ಕೊಟ್ಟಿದ್ದೇವೆ. ದಿನಾಂಕ 4.8.1990 ಕ್ಕೆ ಸರ್ಕಾರಿ ಆದೇಶವಾಯಿತು, ಅದೆಲ್ಲವೂ ನನ್ನ ಹತ್ತಿರವಿದೆ,

ಅದನ್ನು ನಾನು ನೋಡಿದ್ದೇನೆ, ಅವತ್ತಿನಿಂದ with retrospective effect ಕೊಡುವುದಕ್ಕಾಗುವುದಿಲ್ಲವೆಂದು ಈ ಸಮಸ್ಯೆಗಳು ಉಲ್ಬಣವಾಯಿತು. ಸಾಕಷ್ಟು ವಿವರಗಳಿವೆ, ಅದಕ್ಕೆ ಅನೇಕ ರೀತಿಯ ಸಭೆಗಳಾಯಿತು, ಚಟುವಟಿಕೆಗಳಾಯಿತು. ಆಮೇಲೆ ಹೈಕೋರ್ಟಿನ ಸಾಕಷ್ಟು ತೀರ್ಪುಗಳಾಯಿತು, ಸುಪ್ರೀಂ ಕೋರ್ಟಿಗೆ ಹೋಯಿತು, High Court judgment ಅನ್ನು upheld ಮಾಡಿದರು, ಇದೆಲ್ಲಾ ನಮಗೆ ಗೊತ್ತಿರುವ ಸಂಗತಿ, ನಾನು ಈಗ ಆ ವಿವರಕ್ಕೆ ಹೋಗುವುದಿಲ್ಲ. ನಾನು ಈಗ ಇಲ್ಲಿ ಸರ್ಕಾರದಿಂದ ಬಯಸುವುದೇನೆಂದರೆ, ನನ್ನ ಗಮನಕ್ಕೆ ಬಂದಿರುವಂತೆ ಈ ಸಂದರ್ಭದಲ್ಲಿ ಸರ್ಕಾರ ಒಂದು ತಪ್ಪನ್ನು ಏನು ಮಾಡುತ್ತಿದೆ ಎಂದರೆ, ನನ್ನ ವಿನಂತಿ, ನೀವು ಈ ಬಿಲ್ ಅನ್ನು ತಡೆಹಿಡಿದು, ನೀವು ಮಾಡಬೇಕಾದ ಮೊದಲ ಆದ್ಯತೆ ಏನೆಂದರೆ, ಈ ಶಿಕ್ಷಕರ ಸಂಘಟನೆಗಳೊಡನೆ ಚರ್ಚೆ ಮಾಡಬೇಕು ಇದು ಆಗಿಲ್ಲ. ಇವತ್ತು ಎಲ್ಲಾ ಕಡೆಯಿಂದ ನಮ್ಮನ್ನು ಭೇಟಿ ಮಾಡಿ ಅವರು ಏನು ಹೇಳುತ್ತಿದ್ದಾರೆಂದರೆ, ನಮ್ಮ ಜೊತೆ ಸರ್ಕಾರ ಮಾತುಕತೆ ಮಾಡಿಲ್ಲ. ನಾವು ಹಿಂದಿನ ಬಾಕಿಯನ್ನು ಸರ್ಕಾರಕ್ಕೆ ಕೇಳುವುದಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ಸುಪ್ರೀಂ ಕೋರ್ಟಿನ ಆದೇಶದ ಪ್ರತಿಯೂ ನನ್ನಲ್ಲಿದೆ, ಅವರ ಹಿಂದಿನ ಎಲ್ಲಾ ಬಾಕಿ ಕೊಡಿ ಎಂದು ಹೇಳುವುದಿಲ್ಲ, ಬಾಕಿ ಕೊಡಿ ಎಂದು ಯಾವತ್ತು ಅವರು ಸರ್ಕಾರಕ್ಕೆ represent ಮಾಡಿಲ್ಲ. ಈಗ ಈ confusion ಅವರ ಮತ್ತು ಸರ್ಕಾರದ ಮಧ್ಯೆ ಬೆಳೆದಿದೆ. ಅವರು ಹೇಳುವುದೊಂದು ತಾವು ಅರ್ಥೈಸಿ ಕೊಳ್ಳುವುದೊಂದು ಎಂದು ಅವರಿಗೆ ಅನಿಸಿಬಿಟ್ಟಿದೆ. Legal Advisors ಅನ್ನು ಅವರೂ Consult ಮಾಡಿದ್ದಾರೆ, ನಮ್ಮ ಅಧಿಕಾರಿಗಳು, ನಮ್ಮ Legal Advisors ಹೇಗೆ ನಮಗೆ ಮಾಹಿತಿಗಳನ್ನು, ಸಲಹೆಗಳನ್ನು ಕೊಟ್ಟಿದ್ದಾರೋ ಹಾಗೆ ಈ ಶಿಕ್ಷಕ ಸಂಘಟನೆಯವರೂ ಸಹ ಈ ಆದೇಶದ ಬಗ್ಗೆ Consultations ಮಾಡಿದ್ದಾರೆ, ಸರ್ಕಾರ ಏನು ಹೇಳುತ್ತಿದೆ, 4 ಸಾವಿರ ಕೋಟಿ,

5 ಸಾವಿರ ಕೋಟಿ, 7 ಸಾವಿರ ಕೋಟಿ ಬೇಕಾಗುತ್ತದೆಂದು ಈ ರೀತಿ ಅಗತ್ಯವಿರುವುದಿಲ್ಲ, ವರ್ಷಕ್ಕೆ 200-250 ಕೋಟಿ ರೂಪಾಯಿಗಳು ಬೇಕಾಗಬಹುದೆಂದು ಅವರು ಲೆಕ್ಕಾಚಾರ ಮಾಡಿದ್ದಾರೆ, ಏಕೆಂದರೆ ಇದು 25 ಸಾವಿರ ಶಿಕ್ಷರ ಪ್ರಶ್ನೆ ಇದಾಗಿದೆ. ಇದರಿಂದ ನಿಜವಾಗಿ ಜನರು ಕೊಟ್ಟಿರುವ ತೆರಿಗೆ ಹಣಕ್ಕೆ ಭಾರವಾಗಬಾರದೆನ್ನುವುದು ಸರಿ ಇದೆ. ಶಿಕ್ಷಕರ ನ್ಯಾಯಯುತವಾದ ಬೇಡಿಕೆಯನ್ನು 1990 ರವರೆಗೆ ಕೊಟ್ಟಿದ್ದೇವೆ, 1990ರ ಮೊದಲನೆಯವರದು ಒಂದು ರೀತಿ 1990ರ ನಂತರದು ಇನ್ನೊಂದು ರೀತಿ ಹೇಗಾಗುತ್ತದೆ ಎಂದು ಹೈಕೋರ್ಟ್ ಕೋರ್ಟ್ ಎಲ್ಲವೂ ಅದೇ ಆಧಾರದ ಮೇಲೆ ಕೇಳಿದೆ. ಹಾಗಾಗಿ ಈ ಸಂದರ್ಭದಲ್ಲಿ ನಾನು ಮೊದಲು ಆಗ್ರಹಿಸುವುದು, ತಾವು ಮೊದಲು ಶಿಕ್ಷಕರ ಸಂಘಟನೆ ಗಳೊಡನೆ ಚರ್ಚೆ ಮಾಡಿ ಆಮೇಲೆ ಈ ಬಿಲ್ ಅನ್ನು ತನ್ನಿ. ಏಕೆಂದರೆ, ಅವರು ಅನೇಕ ರೀತಿಯಲ್ಲಿ ಸರ್ಕಾರದ ಭಾವನೆಗಳಿಗೆ ಸ್ಪಂದಿಸುವುದಕ್ಕೆ ಸಿದ್ಧರಿದ್ದಾರೆ, ಹಿಂದಿನ ಬಾಕಿ ಕೊಡಿ ಎಂದು ಕೇಳುವುದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಯಾವ ಸಂದರ್ಭದಲ್ಲೂ ಅವರು ಹಿಂದಿನ ಬಾಕಿ ಕೊಡಿ ಎಂದು ಕೇಳಲಿಲ್ಲ. ಅವರಿಗೆ ಕಾಲ್ಪನಿಕ ಸಂದರ್ಭದಲ್ಲಿ step up ಮಾಡಿ ಕೊಡಬೇಕು, ಮುಂದಿನ ಬಡ್ತಿ ವೇತನ ಎಲ್ಲಾ ಕೊಡಬೇಕು, ಅದನ್ನೆಲ್ಲಾ ಕೊಡುವುದರ ಬಗ್ಗೆ ಅವರದು ಸಣ್ಣಪುಟ್ಟ ಬೇಡಿಕೆಗಳಿವೆ, ಅವು ನ್ಯಾಯವಾದ ಬೇಡಿಕೆಗಳು, 1990ರವರೆಗೆ ಕೊಟ್ಟಿದ್ದನ್ನು ನಾವು ಕೊಡಬೇಕಾಗುತ್ತದೆ. ಹಾಗಾಗಿ ಮೊದಲನೆಯದಾಗಿ ಅವರನ್ನು ಕರೆದು ಮಾತನಾಡಬೇಕು, ಅಲ್ಲಿಯತನಕ ಈ ಬಿಲ್‌ಅನ್ನು ಚರ್ಚೆಯಲ್ಲಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಉನ್ನತ ಶಿಕ್ಷಣ ಸಚಿವರಾದ ಮಾನ್ಯ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಇದೇ ವಿಷಯವನ್ನು ಚರ್ಚಿಸುವುದಕ್ಕೆ Cabinet sub committee ಆಗಿದೆ. Cabinet Sub. Committee ಆ ವಿಷಯಗಳನ್ನೂ ಕೂಡ ಇತ್ಯರ್ಥ ಮಾಡಿ Cabinet ಗೆ

ವರದಿಯನ್ನು ಇನ್ನು ಕೊಟ್ಟಿದೆಯೋ ಏನೋ ನಮಗೆ ಗೊತ್ತಿಲ್ಲ. ಹಾಗಾಗಿ Cabinet Sub Committee ಯಲ್ಲಿ ಈ ವಿಷಯದ ಬಗ್ಗೆ ಏನು ನಿರ್ಣಯವಾಗಿದೆ? ಏನು ಚರ್ಚೆಯಾಗಿದೆ? ಇತ್ಯಾದಿಗಳೆಲ್ಲವೂ ಸಹ ನಮ್ಮ ಗಮನಕ್ಕೆ ಬರಬೇಕಾಗುತ್ತದೆ. ಅಂದರೆ ಈ ವಿಷಯದಲ್ಲಿ ಸರ್ಕಾರದ Overall view ಏನು? ಅನುದಾನಕ್ಕೆ ಒಳಪಡಿಸುವುದಕ್ಕೆ ಅಥವಾ ಹಿಂದೆ ಅನುದಾನಕ್ಕೆ ಒಳಪಡಿಸಿರುವ ವಿಷಯಗಳ ಬಗ್ಗೆ Cabinet sub Committee ಯಲ್ಲಿ ಆಗಿರುವ ವಿಷಯಗಳು, main cabinet ಒಪ್ಪಿಕೊಂಡಿದೆಯಾ? ಅದು ಸರ್ಕಾರದ ಮಟ್ಟದಲ್ಲಿ ಯಾವ ಹಂತದ ಚರ್ಚೆಯಲ್ಲಿದೆ ಎನ್ನುವುದನ್ನು ಸರ್ಕಾರ ಸ್ಪಷ್ಟಪಡಿಸಬೇಕಾಗುತ್ತದೆ. ಮೂರನೆಯದಾಗಿ, ನಾನು ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಬಯಸುವುದೇನೆಂದರೆ, ಆಂಧ್ರ ಪ್ರದೇಶ ಸೇರಿದಂತೆ ಎಲ್ಲಾ ರಾಜ್ಯಗಳಲ್ಲೂ ಶಿಕ್ಷಣದಲ್ಲಿ ಈ ಸಮಸ್ಯೆಗಳಿವೆ, ಆಂಧ್ರದಲ್ಲೂ ಇದೇ ರೀತಿಯ ಆಕ್ಟ್ ಅನ್ನು 2000ರಲ್ಲಿ ಮಾಡಿದ್ದರು, ಮುಂದೆ ಅದೇನಾಯಿತು ಎನ್ನುವುದೆಲ್ಲಾ ಗೊತ್ತಿದೆ. ಶಿಕ್ಷಕರು ದೊಡ್ಡ ಹೋರಾಟವನ್ನು ಮಾಡಿದರು, ಸರ್ಕಾರ ಆಮೇಲೆ (ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) cabinet sub committee ಮಾಡಿತು, ಅದರ ವರದಿಯಂತೆ ಮತ್ತೆ ಅನೇಕ ತಿದ್ದುಪಡಿಯನ್ನು ಮಾಡಿ ಶಿಕ್ಷಕರ ಹಿತರಕ್ಷಣೆ ಮಾಡುವುದಕ್ಕೆ ಮುಂದಾಯಿತು. ಹಾಗಾಗಿ ತರಾತುರಿಯಲ್ಲಿ ಈ ಬಿಲ್ ಪಾಸ್ ಮಾಡಿಕೊಂಡು ಹೋಗುವುದು ಬೇಡ. ಪರೀಕ್ಷೆಗಳು ಬರುತ್ತಿದೆ, ಶಿಕ್ಷಕರು ಹೋರಾಟದ ಹೆಜ್ಜೆಗಳನ್ನು ಮುಂದಿಡುವುದಕ್ಕಿಂತ ಮುಂಚೆ ಆಂಧ್ರ ಪ್ರದೇಶದಲ್ಲಿ 2000ರಲ್ಲಿ ಈ ಬಿಲ್ ಮಾಡಿದರು, ಅಲ್ಲಿ ಏನಾಗಿದೆ ನೋಡಿ.. ಅಲ್ಲೂ ಹೋರಾಟವಾಗಿ ಆಮೇಲೆ cabinet sub committee ಅದರ ತಿದ್ದುಪಡಿ ಇದೆಲ್ಲವೂ ಆಯಿತು. ಇದೆಲ್ಲವೂ ಗೊತ್ತಿದ್ದು ಏಕೆ ಸರ್ಕಾರ ಅದಕ್ಕೆಲ್ಲಾ ಅವಕಾಶ ಮಾಡಿಕೊಡಬೇಕು? ಹಾಗಾಗಿ ಆಂಧ್ರ ಪ್ರದೇಶದಲ್ಲಿ ಯಾವ್ಯಾವ ರೀತಿಯಾಗಿ ಈ ಕಾನೂನು ಜಾರಿಗೆ

ಬಂದಿದೆ, ಮತ್ತೆ ಅದಕ್ಕೆ ಏನೇನು cabinet sub committee ತಿದ್ದುಪಡಿಮಾಡಿ ಅದನ್ನು ಅನುಷ್ಠಾನ ಗೊಳಿಸಿದ್ದಾರೆ. ಇದೆಲ್ಲವನ್ನೂ ನೋಡೋಣ. ಈಗ ತಾವು ಮಂಡಿಸಿರುವ ವಿಧೇಯಕದಲ್ಲಿ ಆ ಎಲ್ಲಾ ಸಂಗತಿಗಳನ್ನು ಸೇರಿಕೊಂಡೇ ಇದನ್ನು ಮಂಡಿಸುವುದಕ್ಕೆ ನಮಗೆ ಅವಕಾಶವಾಗುತ್ತದೆ. ಇಲ್ಲವೆಂದರೆ ತರಾತುರಿಯಲ್ಲಿ ಮಾಡುವುದು, ನಾಳೆ ಶಿಕ್ಷಕರು ಪ್ರತಿಭಟನೆಯ ದಾರಿಗಿಳಿಯುವುದು, ವಿದ್ಯಾರ್ಥಿಗಳಿಗೆ ಪರೀಕ್ಷೆಗಳಿವೆ, ಅವರ ಭವಿಷ್ಯದಲ್ಲಿ ಆತಂಕ ನಿರ್ಮಾಣವಾಗುವುದು ಹೀಗೆ ಅನೇಕ ರೀತಿಯಾದ ಸಮಸ್ಯೆಗಳು ಉದ್ಭವವಾಗುವ ಸಾಧ್ಯತೆಗಳಿರುತ್ತವೆ. ಆದಾಗ ಬಾರದೆಂದಿದ್ದರೆ ಇದರ ಬಗ್ಗೆ ಸಮಗ್ರವಾದ ಅಧ್ಯಯನಗಳಾಗಬೇಕು, ಸಮಾಲೋಚನೆಗಳು ನಡೆಯಬೇಕು, ತರಾತುರಿಯಲ್ಲಿ ಇದನ್ನು ತರುವುದು ನಮಗೆ ಸರಿಕಾಣಿಸುವುದಿಲ್ಲವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಈ ವಿಷಯದಲ್ಲಿ ನಾನು ಮೂರು ವಿಷಯಗಳನ್ನೂ ಸ್ಪಷ್ಟಪಡಿಸಿದ್ದೇನೆ, ಈ ಬಗ್ಗೆ ವಿಸ್ತಾರವಾಗಿ ಹೇಳುವುದಕ್ಕೆ ಸಾಕಷ್ಟು ಮಾಹಿತಿಗಳು ನನ್ನಲ್ಲಿ ಇದ್ದರೂ ಸಹ, ನಾನು ಆದ್ಯಾವುದನ್ನೂ ಉಲ್ಲೇಖಿಸುವುದಕ್ಕೆ ಬಯಸುವುದಿಲ್ಲ. ಅನುದಾನರಹಿತ ಸೇವೆಗೆ ಸೇರಿದ ದಿನಾಂಕ ದಿಂದಲೇ ಸೇವೆಯನ್ನು, ಪರಿಗಣಿಸಿ, ವೇತನ, ಬಡ್ತಿ, ಪದೋನ್ನತಿ, ಪಿಂಚಣಿ ಈ ರೀತಿಯ ಸೌಲಭ್ಯವನ್ನು ಕೊಡಬೇಕೆಂದು ಸುಪ್ರೀಂ ಕೋರ್ಟ್ ಹೇಳಿದೆಯೋ ಇದರಲ್ಲಿ ಅರಿಯರ್ಸ್ ಕೊಡಿ ಎಂದು ಎಲ್ಲೂ ಹೇಳಿಲ್ಲ. ರಾಜ್ಯ ಸರ್ಕಾರ ಆ ರೀತಿಯಾಗಿ interpret ಮಾಡುವ ಅಗತ್ಯವೂ ಇಲ್ಲವೆಂದು ಅವರೆಲ್ಲರೂ ಹೇಳುತ್ತಿದ್ದಾರೆ. ಹಾಗಾಗಿ ಅರಿಯರ್ಸ್ ಬಗ್ಗೆ ಸರ್ಕಾರ ಮಾಡಿ ಕೊಂಡಿರುವ ಗೊಂದಲವೆಂದು ಹೇಳುತ್ತಿದ್ದಾರೆ. ನನ್ನ ಹತ್ತಿರ ಸರ್ಕಾರದ ಆದೇಶದ ಪ್ರತಿ ಇದೆ, ಸರ್ಕಾರ ಏನು ಮಾಡಿದೆ? ಸರ್ಕಾರ, ಅಧಿಕಾರಿಗಳ ಮೂಲಕ ಮಾಡಿಸುತ್ತದೆ, ಸರ್ಕಾರ ಎಲ್ಲಿ ತಪ್ಪು ಮಾಡಿದೆ ಎಂದು ಹೇಳುತ್ತೇನೆ, ಅನುದಾನರಹಿತ ಅವಧಿಯನ್ನು ಪರಿಗಣಿಸಿ ನೀಡಬೇಕಾದ ವೇತನ ಬಾಕಿ

ಮೊತ್ತವೆಂದು ಒಂದು ಕಾಲಂ ಹಾಕಿ ಎಲ್ಲಾ ಕಡೆಯಿಂದ ಮಾಹಿತಿಯನ್ನು ತರಿಸುತ್ತಿದ್ದಾರೆ, ಇದೇ confusionಗೆ ಕಾರಣವಾಗಿರುವುದು. ಹೈಕೋರ್ಟ್, ಸುಪ್ರೀಂಕೋರ್ಟ್ ಅಥವಾ ಶಿಕ್ಷಕ ಸಂಘಟನೆಗಳೂ ಯಾರೂ ಕೇಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ಏನೋ ನನಗೆ ಗೊತ್ತಿಲ್ಲ, ಅಧಿಕಾರಿ ವರ್ಗದವರು ಈ ಅನುದಾನ ರಹಿತ ಅವಧಿಯನ್ನು ಪರಿಗಣಿಸಿ ನೀಡಬೇಕಾದ ವೇತನ ಬಾಕಿ ಎಂದು ಒಂದು ಕಾಲಂ ಹಾಕಿದರು. ಅಲ್ಲಿಂದ ಸಮಸ್ಯೆಗಳು ಇಲ್ಲಿ ಶುರುವಾಯಿತು ಇವರು ಬಾಕಿ ಕೊಡಬೇಕಾದ ಹಣವೆಷ್ಟು ಎನ್ನುವುದನ್ನು ಲೆಕ್ಕ ಹಾಕುವುದಕ್ಕೆ ಶುರು ಮಾಡಿದರು, ಆದು ಸರ್ಕಾರಕ್ಕೆ ಭಾರ ವೆನಿಸುವುದಕ್ಕೆ ಶುರುವಾಯಿತು. ಹಾಗಾಗಿ ಈ ಕಾಲಂ ಹಾಕಿದ್ದೆ ತಪ್ಪು ಎನ್ನುವುದು ನಮ್ಮ ಅಭಿಪ್ರಾಯವಾಗಿದೆ, ಈ ಕಾಲಂ ಹಾಕಿ ಮಾಹಿತಿಯನ್ನು ತರಿಸುವ ಅಗತ್ಯವೇ ಇರಲಿಲ್ಲವೆನ್ನುವುದು ನನ್ನ ಅಭಿಪ್ರಾಯವಾಗಿದೆ. Higher Education, Primary and Secondary Educationನಲ್ಲೂ ಈ ಕಾಲಂ ಅನ್ನು ಹಾಕಿ ಮಾಹಿತಿಯನ್ನು ತರಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಹೈಕೋರ್ಟ್, ಸುಪ್ರೀಂಕೋರ್ಟ್ ಹೇಳ ದಿರುವುದನ್ನು, ಶಿಕ್ಷಕರ ಸಂಘ ಕೇಳದಿರುವುದನ್ನು ನಾವು assumption ಮೇಲೆ ಈ ರೀತಿ ತಂದು ಶಿಕ್ಷಣ ಕ್ಷೇತ್ರದಲ್ಲಿ ಸಮಸ್ಯೆಗಳನ್ನು ನಿವಾರಣೆ ಮಾಡುವುದರ ಬದಲಾಗಿ, ಶಿಕ್ಷಣ ಕ್ಷೇತ್ರದಲ್ಲಿ ಸಮಸ್ಯೆಗಳನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದೇವೆನ್ನುವ ಭಾವನೆ ಬರುವುದಕ್ಕೆ ಸಾಧ್ಯವಾಗಿದೆ. ನಾನು ಮತ್ತೊಮ್ಮೆ ಈ ಸರ್ಕಾರವನ್ನು ಆಗ್ರಹಿಸುತ್ತೇನೆ ತಾವು ತಕ್ಷಣ ಇದನ್ನು ತಡೆ ಹಿಡಿದು ಇದರ ಬಗ್ಗೆ ಸಮಾಲೋಚನೆ ಮಾಡಿ ಬೇರೆ ಬೇರೆ ರಾಜ್ಯಗಳಲ್ಲಿ ಏನಾಗಿದೆ ಎಂದು ನೋಡಿ ಸರಿಯಾದ ರೀತಿಯಲ್ಲಿ ಇನ್ನಷ್ಟು Consultation ಗಳನ್ನು ಮಾಡಿ ನಂತರ ಇದನ್ನು ಮುಂದೆ ತೆಗೆದುಕೊಂಡು ಹೋಗಬೇಕು. ಇಲ್ಲದಿದ್ದರೆ ಶಿಕ್ಷಕರಿಗಂತೂ ನಿಶ್ಚಿತವಾಗಿ ಬಹಳ ದೊಡ್ಡ ಆಘಾತವಾಗುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಕೂಡ ಬಹಳ ದೊಡ್ಡ ತೊಂದರೆ ತೊಡಕು ಹಾಗೂ ಸಂಘರ್ಷ ನಿರ್ಮಾಣವಾಗುವುದಿದೆ.

ಅದನ್ನು ತಪ್ಪಿಸುವುದಕ್ಕೆ ಸರ್ಕಾರ ಈ ಮಾರ್ಗ ಅನುಸರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಧಾರವಾಡ ಕೇಂದ್ರ): ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಬಹಳ ವಿವರವಾಗಿ ಮಾತನಾಡಿದರು. ನಾನು ಅದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಒಂದೆರಡು ವಿಷಯ ಹೇಳುತ್ತೇನೆ. ಸುಪ್ರೀಂ ಕೋರ್ಟಿನಲ್ಲಿ ಕೇಸ್ ನಡೆಯುತ್ತಿದೆ. ಈಗ disposal ಆಗಿದೆ. ಆಗ ಕೇಸ್ ನಡೆಯುವಂತಹ ಸಂದರ್ಭದಲ್ಲಿ ಹಿಯರಿಂಗ್ ಸಮಯದಲ್ಲಿ ನಮ್ಮ ರಾಜ್ಯದಿಂದಲೂ advocates ಇದ್ದರು. ಈ ಎಲ್ಲಾ ವಿಷಯಗಳನ್ನು ಅವರು ಅಲ್ಲಿ ಪ್ರಸ್ತಾಪ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ನಿಮ್ಮ advocate ಅಲ್ಲಿ ಏನು stand ತೆಗೆದು ಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಅಲ್ಲಿ ಏನು interpretation ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ಅದನ್ನು ನೀವು ಹೇಳಬೇಕು. ಅಲ್ಲಿ represent ಮಾಡಿದಾಗ ನಿಮ್ಮ stand ಏನಿತ್ತು ನಿಮ್ಮ defence ಏನಿತ್ತು ಅದನ್ನೂ ಹೇಳಬೇಕಾಗುತ್ತದೆ. ಸುಪ್ರೀಂ ಕೋರ್ಟಿನಲ್ಲಿ ಏನು judgment ಕೊಟ್ಟರು ಆ judgment ನ interpretation ಏನಾಗಿದೆ ಎನ್ನುವಂಥದ್ದು ನಿಮ್ಮ Advocate Generalನವರಿಂದ opinion ತೆಗೆದುಕೊಂಡು ನೀವು ಮಾಡಬೇಕಾಗುತ್ತದೆ. ಇಲ್ಲಿ ಬಹಳಷ್ಟು ಚರ್ಚೆ ಯಾಗುತ್ತಿರುವುದು 4,000 ಕೋಟಿಯೋ 5,000 ಕೋಟಿಯೋ Public Exchequer ಗೆ ಬಹಳಷ್ಟು Burden ಆಗುತ್ತದೆ ಎಂದು ತಾವು ಹೇಳಿದಿರಿ, ಯಾವುದೇ ಸರ್ಕಾರ ಇದ್ದರೂ burden ಜಾಸ್ತಿಯಾಗುವುದನ್ನು ನಾವು ವಿಚಾರ ಮಾಡುವಂಥದ್ದು. ಆದರೆ ಅಲ್ಲಿ confusion ಇರುವಂಥದ್ದು. ಎಷ್ಟು ಜಾಸ್ತಿಯಾಗುತ್ತದೆ? Supreme Court direction ಪ್ರಕಾರ ಏನೇನು ಕೊಡಬೇಕಾಗುತ್ತದೆ? ನಿಮ್ಮ ಅಧಿಕಾರಿಗಳು ಏನು

ಮಾಹಿತಿಯನ್ನು ಸಂಗ್ರಹ ಮಾಡುತ್ತಿದ್ದಾರೆ ಅದರ ಆಧಾರದ ಮೇಲೆ ಇಷ್ಟು ಹಣ Exchequer ಮೇಲೆ ಬರ್ಡನ್ ಬರುವುದಿಲ್ಲ ಎನ್ನುವಂತಹ ಒಂದು ವಾದ ಇದೆ. ಅದರ ಬಗ್ಗೆ ಸ್ಪಷ್ಟವಾದ ಮಾಹಿತಿ ನಿಮ್ಮ ಕಡೆ ಇದೆಯೋ ಹೇಗೆ? ಅಧಿಕಾರಿಗಳು ಆ ರೀತಿ ಮಾಹಿತಿ ಕೊಟ್ಟಿದ್ದಾರೆ. ಅದು ಹೇಗೆ ಎಂಬ ಬಗ್ಗೆ ಕೂಡ ತಾವು ಸ್ಪಷ್ಟೀಕರಣ ಮಾಡಬೇಕಾಗುತ್ತದೆ. 25,000ಕ್ಕೂ ಹೆಚ್ಚು ಶಿಕ್ಷಕರಿಗೆ ತಕ್ಷಣವೇ effect ಆಗುವಂಥದ್ದು. ಶಿಕ್ಷಕರ ಸಂಘದ ಪ್ರಮುಖರನ್ನು ಕರೆದು ಕುಳಿತು ಮಾತನಾಡಿ, ಕ್ಯಾಬಿನೆಟ್ ಸಬ್ ಕಮಿಟಿ ಆಗಿದ್ದರೆ ಅಲ್ಲಿ ಕೂಡ ಇದರ ಬಗ್ಗೆ thorough discussion ಮಾಡಿಕೊಂಡು ಆ ಶಿಕ್ಷಕರ ಪ್ರತಿನಿಧಿಗಳನ್ನು ಕರೆದು ಕೂಲಂಕಷವಾಗಿ ಚಿಂತನೆ ಮಾಡಿ, ಅವರು ನಮಗೆ ಕೊಟ್ಟಂತಹ ಮಾಹಿತಿ ಪ್ರಕಾರ Exchequer ಮೇಲೆ ಹೆಚ್ಚು ಬರ್ಡನ್ ಆಗುವುದಿಲ್ಲ. 200 ರಿಂದ 250 ಕೋಟಿ ರೂ. ಗಳವರೆಗೆ ಮಾತ್ರ ಬರ್ಡನ್ ಆಗುವಂಥದ್ದು. ಕೂತು ಮಾತನಾಡಿ ಇದನ್ನು ಬಗೆಹರಿಸುವಂಥದ್ದು ಮಾಡಿದರೆ ಒಳ್ಳೆಯದು. ಸುಪ್ರೀಂ ಕೋರ್ಟಿನ ಆಜ್ಞೆ ಆಗಿದೆ, ನಿಮ್ಮ ಎಲ್ಲಾ ವಾದವನ್ನು ಮಂಡನೆ ಮಾಡಿದ ನಂತರ ಈ ಆಜ್ಞೆ ಬಂದಿದೆ ಎಂದರೆ, ನಿಮ್ಮ ವಕೀಲರು ವಾದ ಮಂಡನೆ ಮಾಡಿರಬಹುದು, ಮಂಡನೆ ಮಾಡದೆಯೂ ಇರಬಹುದು ಅದರ ಬಗ್ಗೆಯೂ ನೀವು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ನಿಮ್ಮ ವಾದ ಮಂಡನೆ ಆದ ಮೇಲೆಯೂ, ಸಹಿತ ಸುಪ್ರೀಂ ಕೋರ್ಟ್ ಈ ರೀತಿ ತೀರ್ಮಾನಕ್ಕೆ ಬಂದಿದೆ ಎಂದರೆ, ಅಲ್ಲಿ ಒಂದಿಷ್ಟು ಸತ್ಯಾಂಶ ಇರಲಿಕ್ಕೆ ಸಾಧ್ಯತೆ ಇದೆ. ಶಿಕ್ಷಕರ ಹಿತಾಸಕ್ತಿ ದೃಷ್ಟಿಯಿಂದ ಇದನ್ನು ಗಮನಹರಿಸಬೇಕಾಗುತ್ತದೆ. ದಯವಿಟ್ಟು ಅವರನ್ನೆಲ್ಲಾ ಕರೆಸಿ ಕೂತು ಮಾತನಾಡಿ. ಇದು ಸುಮ್ಮನೆ ಮತ್ತೆ Complication ಆಗಬಾರದು. conflict, ಹೋರಾಟ, strike ಇವೆಲ್ಲಾ ಆಗಬಾರದು. ನಾಳೆ ಶಿಕ್ಷಣ ವ್ಯವಸ್ಥೆಗೆ ತೊಂದರೆಯಾಗಬಾರದು. ಆ ದೃಷ್ಟಿಯಿಂದ ತಕ್ಷಣವೇ ಅವರನ್ನು ಕರೆಸಿ ಕೂತು ಮಾತನಾಡಿ. ಅಲ್ಲಿಯವರೆಗೆ

ಈ ಬಿಲ್ ಅನ್ನು ತಡೆಹಿಡಿಯಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ (ನವಲಗುಂದ) : ಮಾನ್ಯ ಉಪಾಧ್ಯಕ್ಷರೆ, 1983ರ Education Act ಪ್ರಕಾರ ನೇಮಕಾತಿ ಮಾಡಿಕೊಂಡ ದಿವಸದಿಂದ ಕೊಡಬೇಕೆಂದು ಸರ್ಕಾರ ಅಪ್ರೂವಲ್ ಮಾಡಿದೆ. ಇಲ್ಲಿ ಸುಪ್ರೀಂ ಕೋರ್ಟ್ ಡಿಸಿಷನ್ ಪ್ರಕಾರ ಸರ್ಕಾರ ಏನು ಮಾಡಬೇಕು ಎನ್ನುಂತಹ ನಿರ್ಣಯದ ಬಗ್ಗೆ ಚರ್ಚೆ ಮಾಡಬೇಕು. ಅದು ಇನ್ನು ಕೊಡಬೇಕು ಬಿಡಬೇಕು ಎಂದು ಶಿಕ್ಷಕರ ಸಂಘಟನೆಗಳು ಅವರ ಜೊತೆ ನೆಗೋಷಿಯೇಷನ್ ಮಾಡಿ ಬಗೆಹರಿಸಿದರೆ ಮುಗಿಯುತ್ತದೆ ಎಂದು ಹೇಳುತ್ತವೆ. ಇದನ್ನು ಕಾನೂನಾತ್ಮಕವಾಗಿ ಚರ್ಚೆ ಮಾಡಿಕೊಂಡು ಹೋದರೆ ಸರ್ಕಾರಕ್ಕೆ ಹೊರೆಯಾಗುವುದು ಗ್ಯಾರಂಟಿ. ಶಿಕ್ಷಕರ ಸಂಘಟನೆಗಳನ್ನು ಕರೆದುಕೊಂಡು ಅವರ ಸ್ವಂತ ಹಿತಾಸಕ್ತಿಗೆ ಏನಾದರೂ ಹೊಂದಾಣಿಕೆ ಮಾಡಿಕೊಂಡರೆ ಒಳ್ಳೆಯದು. ಸುಪ್ರೀಂ ಕೋರ್ಟಿನ ಆದೇಶ ಸ್ಪಷ್ಟವಾಗಿದೆ. ಎಲ್ಲರಿಗೂ ಕೊಡಬೇಕೆಂದು ಆದೇಶವಾಗಿದೆ. ಇದರ ಬಗ್ಗೆ ಬಹಳ ಚರ್ಚೆ ಮಾಡುವುದಕ್ಕಿಂತ ಮೊದಲು ಸರ್ಕಾರ ಅದಕ್ಕೆ ಮಧ್ಯಸ್ಥಿಕೆ ವಹಿಸಿ ಅವರೆಲ್ಲರನ್ನೂ ಕರೆದು amicable settlement ಮಾಡಬೇಕು, otherwise, ನಾವು ಇಲ್ಲಿ ಚರ್ಚೆ ಮಾಡಿಕೊಂಡು ಕುಳಿತುಕೊಳ್ಳುವುದು, ಹಿಂದೆ ತಪ್ಪಾಗಿದೆ, ಹಿಂದೆ ತಪ್ಪಾಗಿದೆ ಎಂದು ಹೇಳುವುದು, ಯಾರ್ಯಾರು ಸರ್ಕಾರ ನಡೆಸಿದ್ದಾರೆ ಯಾರಿಂದ ತಪ್ಪಾಗಿದೆ ಅದು ವಿಷಯ ಬೇರೆ. ಅದರ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಿ ಸರ್ಕಾರಕ್ಕೂ ತೊಂದರೆಯಾಗಬಾರದು ಶಿಕ್ಷಕರಿಗೂ ತೊಂದರೆಯಾಗದ ರೀತಿಯಲ್ಲಿ ನಡೆಸಬೇಕು.

ಶ್ರೀ ಕೆ . ಶಿವಮೂರ್ತಿ (ಮಾಯಕೊಂಡ) : ಮಾನ್ಯ ಉಪಾಧ್ಯಕ್ಷರೆ, ಈ ಬಿಲ್‌ಅನ್ನು ಪಾಸ್ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನಾವು ಬೆಂಬಲ ಕೊಡುತ್ತೇವೆ. ಮಾನ್ಯ ದೇಶಪಾಂಡೆಯವರು ಈ ಬಿಲ್‌ನಲ್ಲಿರುವ ಸಾಮಾಜಿಕ ನ್ಯಾಯವನ್ನು ದಯವಿಟ್ಟು ನೋಡಬೇಕು. ಕಾಂಗ್ರೆಸ್ ಸರ್ಕಾರ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದೆ. ಇದರಲ್ಲಿ SC / ST ಪದ ಎಲ್ಲಿಯೂ ಇಲ್ಲ. ಯಾವುದೇ ಬಿಲ್ ತರಬೇಕಾದರೆ SC / ST , Backward class , Minority ಈ ಪದಗಳು ಪ್ರಯೋಗ ಆಗಬೇಕು. ಅವರಿಗೆ ರಕ್ಷಣೆ ಆಗಬೇಕು. ಅವರ ಸಂಸ್ಥೆಗಳಿಗೆ ಏನು ಪ್ರಾಧಾನ್ಯತೆ ಕೊಡಬೇಕು ಎಂದು ಎಲ್ಲಿಯೂ ಇಲ್ಲ. ಸಾರಾಸಗಟಾಗಿ ಸುಪ್ರೀಂ ಕೋರ್ಟ್ ಹೇಳಿದೆ. ಶ್ರೀಮಂತರು ಶಕ್ತಿವಂತರು ಹೈಕೋರ್ಟಿಗೆ ಹೋಗುತ್ತಾರೆ ಸುಪ್ರೀಂ ಕೋರ್ಟಿಗೆ ಹೋಗುತ್ತಾರೆ. ಅವರ ಅನುಕೂಲಕ್ಕೆ ತಕ್ಕ ಹಾಗೆ ಆರ್ಡರ್ ಮಾಡಿಸಿಕೊಂಡು ಬರುತ್ತಾರೆ. ಆದರೆ ದುರ್ಬಲರು ಎಲ್ಲಿಗೆ ಹೋಗುತ್ತಾರೆ? ಶಿಕ್ಷಣ ಯಾರಿಗೆ ಅವಶ್ಯಕತೆ ಇದೆ? ದುರ್ಬಲರಿಗೆ ಅವಶ್ಯಕತೆ ಇದೆ. 380 ಪ್ರಸ್ತಾವನೆಗಳು 10 ವರ್ಷಗಳಿಂದ grant ಇಲ್ಲದ ಹಾಗೆಯೇ ಇವೆ. Economy measure ಎನ್ನತಕ್ಕಂತಹ ಒಂದು ಹೊಸ ಪ್ರಯೋಗ ಮಾಡಿ ದುಡ್ಡು ಕೊಟ್ಟವರಿಗೆ ಶಕ್ತಿವಂತರಿಗೆ grant ಕೊಡುತ್ತಾರೆ. ಶಕ್ತಿ ಇಲ್ಲದೆ ಇರುವವರಿಗೆ ಕದ ಮುಚ್ಚಿದ್ದಾರೆ. ಈ ರೀತಿ ತಾರತಮ್ಯ ಮಾಡಿರತಕ್ಕಂಥದ್ದು ಸರಿಯೇ? ದಯವಿಟ್ಟು ಅದನ್ನು ಪರಿಶೀಲನೆ ಮಾಡಬೇಕು. Whether it is primary school, or Secondary School or high school or pre university College or first grade College, ಅನ್ಯಾಯವಾಗಿರತಕ್ಕಂಥದ್ದು ಈ ಶಿಕ್ಷಣ ಇಲಾಖೆಯಲ್ಲಿ. ಎಲ್ಲಿಯವರೆಗೆ SC/ST, Backward class ಹಾಗೂ Minority ಗಳಿಗೆ ರಕ್ಷಣೆ ಇಲ್ಲವೋ ಅಂತಹ ಬಿಲ್ ಅನ್ನು ಪಾಸ್ ಮಾಡುವುದು ಸಾಮಾಜಿಕ ನ್ಯಾಯಕ್ಕೆ ವಿರೋಧವಾಗುತ್ತದೆ. ಹಿಂದಿನ ದಿನಗಳಲ್ಲಿ ಶಾಲೆಗಳನ್ನು ಮುಚ್ಚುವ ಕೆಲಸ ಮಾಡಿದ್ದಾರೆ. SC/ST

ಯವರು ನಡೆಸತಕ್ಕಂತಹ grant-in-aid ಶಾಲೆಗಳು ಗ್ರಾಮೀಣ ಪ್ರದೇಶ ಗಳಲ್ಲಿರತಕ್ಕಂತಹ ಶಾಲೆಗಳನ್ನು ವ್ಯವಸ್ಥಿತವಾಗಿ ಮುಂದುವರೆಯಬಾರದು, ಅವರಿಗೆ ವಿದ್ಯಾಭ್ಯಾಸ ಕೊಡಬಾರದು ಎನ್ನುವಂತಹ ಮನುವಾದಿಯ ಪ್ರವೃತ್ತಿಯಿಂದ ಶಾಲೆಗಳ ಕದಗಳನ್ನು ಮುಚ್ಚಿದರು. ಕಾಲೇಜುಗಳನ್ನು ಎಷ್ಟು ಕೊಟಿದ್ದಾರೆ? ನಾನು ಈ ಸದನದ ಮೂಲಕ ಶಿಕ್ಷಣ ಇಲಾಖೆ ಸಚಿವರಿಗೆ ಕೇಳುತ್ತೇನೆ, SC / ST ಜನಸಂಖ್ಯೆ ಆಧಾರದ ಮೇಲೆ ಎಷ್ಟು ಶಾಲೆಗಳು ಇತ್ತೀಚಿನ ದಿನಗಳಲ್ಲಿ ಮಂಜೂರಾತಿ ಆಗಿವೆ? Grant ಗೆ admit ಆಗಿವೆ? ಎಷ್ಟು ಹೈಸ್ಕೂಲ್‌ಗಳು ಆಗಿವೆ? ಎಷ್ಟು ಕಾಲೇಜುಗಳು ಆಗಿವೆ ಎಷ್ಟು ಪಾಲಿಟೆಕ್ನಿಕ್ ಆಗಿವೆ? ಎಷ್ಟು ಇಂಜಿನಿಯರಿಂಗ್ ಕಾಲೇಜುಗಳು ಆಗಿವೆ? ಎಷ್ಟು ಪ್ರಮಾಣದಲ್ಲಿ ಕೊಟ್ಟಿದ್ದೀರಿ? ಕೊಡದೆ ಇದ್ದರೆ ಅವರಿಗೆ ಅನ್ಯಾಯ ಮಾಡಿದ ಹಾಗೆ ಅಲ್ಲವಾ? ಸಿಬ್ಬಂದಿಗಳಿಗೆ ಅನುಕೂಲ ಕೊಡಲಿಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ನೀವು ಕೊಡುವುದಕ್ಕಿಂತ ಮುಂಚೆ ಸಾಮಾಜಿಕ ನ್ಯಾಯದ ಅಡಿಯಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶದ SC/ST ಶಾಲೆಗಳಿಗೆ ಹಾಗೂ ಹೆಣ್ಣು ಮಕ್ಕಳಿಗೆ ಅನುಕೂಲವಾಗಿದೆ? ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಕೂತಿದ್ದಾರೆ. ಆರ್ಥಿಕ ಇಲಾಖೆ ಅವರ ಬಳಿಯೇ ಇದೆ. ನಾನು ತಮ್ಮ ಮೂಲಕ ಅವರ ಗಮನ ಸೆಳೆಯುತ್ತೇನೆ. ಸಾಮಾಜಿಕ ನ್ಯಾಯದ ಬಗ್ಗೆ ಕಳಕಳಿ ಇರಕ್ಕತಂತಹ ನಮ್ಮ ಕಾಂಗ್ರೆಸ್ ಸರ್ಕಾರ ತಮ್ಮ ನೇತೃತ್ವದ ಸರ್ಕಾರ SC/ST ಅನುದಾನಿತ ಶಾಲೆ ಹಾಗೂ ಕಾಲೇಜುಗಳ ಬಗ್ಗೆ ಹೈಸ್ಕೂಲ್ ಬಗ್ಗೆ ಗ್ರಾಂಟ್ ಕೊಟ್ಟು, starting grant ಕೊಟ್ಟು, buildingಗೆ ಅನುದಾನ ಕೊಟ್ಟು ಅವರಿಗೆ ರಕ್ಷಣೆ ಕೊಟ್ಟು ಆ ನಂತರ ಈ ಬಿಲ್‌ಅನ್ನು ಪಾಸ್ ಮಾಡಬೇಕೆಂದು ನನ್ನ ಪ್ರಾರ್ಥನೆ.

ಉಪಾಧ್ಯಕ್ಷರು : ಮಾನ್ಯ ರಮೇಶ್ ಕುಮಾರ್‌ರವರೇ ಮಾತನಾಡಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್(ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೆ, ನನಗೆ ಒಂದು ಅರ್ಥವಾಗುತ್ತಿಲ್ಲ. ಮಾನ್ಯ ಶಿಕ್ಷಣ ಸಚಿವರು ಈ ಬಿಲ್‌ಅನ್ನು ಸದನದ ಮುಂದೆ ತಂದಿದ್ದಾರೆ. I was very quietly listening to the former Education Minister, ಅದರ ಮಾತು ಸಂಪೂರ್ಣ confusion ಇದೆ. What he was trying to say, ನನಗೆ ಆರ್ಥವೇ ಆಗಲಿಲ್ಲ. ನಾನು ಒಂದು ಅಕ್ಷರವನ್ನೂ ಬಿಡದೆ ಗಮನಿಸುತ್ತಿದ್ದೆ. ಅವರು ಹೇಳಿದರು, aggrieved parties High Court ಗೆ ಹೋಗುತ್ತಾರೆ. ಆ ಮೇಲೆ ಸುಪ್ರೀಂ ಕೋರ್ಟಿಗೆ ಹೋಗುತ್ತಾರೆ. What was their prayer before the Supreme Court? ಸುಪ್ರೀಂ ಕೋರ್ಟಿನ ಡಿಸಿಷನ್ ಏನಾಗಿದೆ? ಸರ್ಕಾರಕ್ಕೆ ಏನಾದರೂ ಸುಪ್ರೀಂ ಕೋರ್ಟ್‌ನ ಡಿಸಿಷನ್‌ನ implement ಮಾಡತಕ್ಕಂತಹ ಅನಿವಾರ್ಯತೆ ಇದೆಯೇ? ಏಕೆ ಈ ಸ್ಥಿತಿ ಬಂದಿತು? ಅವರು ಶಿಕ್ಷಕರ ಸಂಘಟನೆಗಳನ್ನು ಕರೆಸಿ ಮಾತನಾಡಿ ಎಂದರು. ಯಾವ ಸಂಘಟನೆಗಳನ್ನೂ ಕರೆಸಿ ಮಾತನಾಡುವುದಕ್ಕೆ ನಮ್ಮದೇನೂ problem ಇಲ್ಲ. ಆದರೆ ನಮ್ಮ ಮೂಲಭೂತ ಪ್ರಶ್ನೆ ಏನೆಂದರೆ, ಯಾರ್ಯಾರು ಸಂಘಟಿತರಾಗಿ ಬಂದು ಡಿಮಾಂಡ್ ಇಡುತ್ತಾರೆ ಅವರನ್ನೆಲ್ಲಾ ಸರ್ಕಾರಗಳು ಕರೆಸಿ ಮಾತನಾಡುತ್ತದೆ, all successive Governments, ಯಾರು disorganized ಇದ್ದಾರೆ ಅವರನ್ನು ಯಾರೂ ಕರೆಸುವುದೂ ಇಲ್ಲ, ಮಾತನಾಡಿಸುವುದೂ ಇಲ್ಲ ಅವರ ಬಗ್ಗೆ ಚರ್ಚೆ ಮಾಡುವುದಕ್ಕೆ ಇಲ್ಲಿ ಸಮಯವೂ ಸಿಗುವುದಿಲ್ಲ. Mr.Shivamurthy was mentioning. Interestingly this is a situation where it is a fight between the legal justice and the social justice. Legal justice is an inheritance of medieval times and imperial times, They plead for status - quo, Social justice is a necessity of the society. ಇಲ್ಲಿ, whose interest are we discussing? ಎಷ್ಟು ನಿಮಗೆ ಲಯಬಲಿಟಿ ಬರುತ್ತದೆ

ಎನ್ನುವುದು ಅಲ್ಲ, if some officers have asked for that information, ಎಷ್ಟು ಸಾವಿರ ಕೋಟಿ ಆಗುತ್ತದೆ ಎಂದು ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೇಳಿದರೆ, how can those officers act on their own? Do they have the sanction of the Hon ' ble Minister? The Minister should verify. Uncalled for, ಹೇಗೆ ಕೇಳುತ್ತಾರೆ? How do they solicit such information? ಆಡಳಿತಕ್ಕೆ ಒಂದು ಗೌರವ ಮರ್ಯಾದೆ ರೀತಿ ರಿವಾಜು ಇಲ್ಲವಾ? ಒಂದು ಬಿಲ್ ಹೌಸ್‌ನಲ್ಲಿ ಪಾಸ್ ಮಾಡುವುದು ಎಂದರೆ, it is the fundamental duty of this House to legislate. How are we to legislate? We are totally blind . We don ' t know what is the factual position? ಯಾರಿಗೆ ಕೊಡುತ್ತೇವೆ grant-in-aid? ಶಿಕ್ಷಣದ ಅಗತ್ಯ ಹೆಚ್ಚಿರತಕ್ಕಂಥ ಜಾಗದಲ್ಲಿ ಸರ್ಕಾರ ಯಾವಾಗ ಮುಂದೆ ಬರುವುದಿಲ್ಲವೋ, ಪ್ರಯತ್ನ ಮಾಡುವುದಿಲ್ಲವೋ ಅಂಥ ಕಡೆ ಸ್ಥಳೀಯ ಜನರ ಅಗತ್ಯತೆಗೋಸ್ಕರ ತಾವು ಎಲ್ಲ ಕಷ್ಟಗಳನ್ನು ಮೈಮೇಲೆ ಹಾಕಿಕೊಂಡು ಮುಂದೆ ಬಂದು ಒಂದು ಸಂಸ್ಥೆಯನ್ನು ಪ್ರಾರಂಭ ಮಾಡಿ, ನಾವು ಇಷ್ಟು ದಿವಸಗಳ ಕಾಲ ನಡೆಸಿದ್ದೇವೆ, ಇನ್ನು ಮುಂದೆ ನಮ್ಮ ಕೈಯಲ್ಲಿ ಆಗುತ್ತಿಲ್ಲ, ನಮಗೆ ಶಕ್ತಿಯಿಲ್ಲ, ಈ ಶಾಲೆಯನ್ನು ಮುಚ್ಚಬೇಕಾಗುತ್ತದೆ, ಈ ಶಾಲೆಯಲ್ಲಿ ಇಷ್ಟು ಮಕ್ಕಳಿದ್ದಾರೆ ಆದ ಕಾರಣ ದಯಮಾಡಿ ಸರ್ಕಾರದವರಾದ ನೀವು ನಮ್ಮ ನೆರವಿಗೆ ಬನ್ನಿ ಎಂದರೆ, Social grounds ಮೇಲೆ ಸರ್ಕಾರ ತನ್ನ ವಿವೇಚನೆಯನ್ನು use ಮಾಡಿ ಅವರಿಗೆ grant-in-aid ಅನ್ನು ಕೊಡತಕ್ಕಂಥದ್ದು, ಆ date ನಿಂದ ಅವರನ್ನು grant-in-aid Codeಗೆ ತೆಗೆದುಕೊಂಡಿರತಕ್ಕಂಥದ್ದು ಎಂದು ನಮಗೆ ಅರ್ಥವಾಗಿರತಕ್ಕಂಥ ಒಂದು ಸಿದ್ಧಾಂತ, ಆ ಶಾಲೆ grant-in-aid ಗೆ ಬಂದಿದೆಯೆಂದರೆ they almost become the Government Instituation. ಹಳ್ಳಿಗಳಲ್ಲಿ ಇವತ್ತು ವಾತಾವರಣ ಏನಾಗಿದೆ? ಸರ್ಕಾರಿ ಶಾಲೆಗಳು ಮತ್ತು

ಮುಚ್ಚುವಂಥ ಪರಿಸ್ಥಿತಿಗೆ ಬಂದಿವೆ. 16,8,20 ರಂತೆ ವಿದ್ಯಾರ್ಥಿಗಳು ಮಾತ್ರ ಇದ್ದಾರೆ. We have to close down the government institutions. There is a craze, ಇವತ್ತು ಕೂಲಿ ಮಾಡತಕ್ಕಂಥವರು ಕೂಡ ಹೊಟ್ಟೆಗೆ ಕಟ್ಟಿ ತನ್ನ ಮಕ್ಕಳನ್ನು ಕಾನ್ವೆಂಟ್‌ಗೆ ಕಳುಹಿಸುತ್ತಿದ್ದಾರೆ. ಇವತ್ತು ನೀವು ತರಿಸಿ ಮಾಹಿತಿ, ಒಂದೊಂದು ತಾಲ್ಲೂಕಿನಲ್ಲಿಯೂ ಎಷ್ಟೆಷ್ಟು private institutions ಇದೆಯೆಂದು. ಇವರಿಗೆ ಯಾರು ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ? ಅದು ಆ ಕಡೆಗೆ ಆಗಬೇಕು, ಸರ್ಕಾರಿ ಶಾಲೆಯೂ ಮುಚ್ಚಿಹೋಗಿಬಿಡಬೇಕು, ಇಲ್ಲಿ ಹೊಸದಾಗಿ ಇರತಕ್ಕಂಥ ಅನುದಾನಿತ ಸಂಸ್ಥೆಗೆ ಹೆಚ್ಚು ಹಣವನ್ನು ಕೊಡಬೇಕು, because they are organized. I would only appeal to the Chair this much that let the Hon ' ble Minister for Education brief the House what was their prayer before the High Court and subsequently who went to Supreme Court? ಅವರು aggrieved ಆಗಿದ್ದೀರಾ? ನೀವು aggrieved ಆಗಿದ್ದರಾ? What is the finding ? Interim solution ಏನಾದರೂ ಕೊಟ್ಟಿದ್ದಾರೆಯೇ ಅಥವಾ final disposal ಏನಾದರೂ ಆಗಿದೆಯೆ? Final disposal ನಿಮ್ಮ ಪರವಾಗಿದೆಯೇ? ನಿಮ್ಮ ವಿರುದ್ಧವಾಗಿದೆಯೆ? ನಿಮ್ಮ ವಿರುದ್ಧವಾಗಿದ್ದರೆ further steps ನೀವೇನು ತೆಗೆದುಕೊಂಡಿದ್ದೀರಿ? ಇದರಿಂದ ಎಷ್ಟು ಆರ್ಥಿಕ ಹೊರ ಬರುತ್ತದೆ? ಏಕೆ ಮಾಡಬೇಕು? Grant-in-aid ಗೆ ತೆಗೆದುಕೊಂಡ ದಿವಸದಿಂದ ಕೊಡತಕ್ಕಂಥದ್ದು ಸಾಧುವಾದದ್ದು. ಆದರೆ ಅದರ earlier date ಗೆ ಕೊಡಬೇಕು, with retrospective effect ಕೊಡಬೇಕೆಂದರೆ is it fair ? 25 ಸಾವಿರ ಇರಬಹುದು, 25 ಲಕ್ಷ ಜನರು ಇರಬಹುದು, ಈ ರಾಜ್ಯದ ಜನಸಂಖ್ಯೆ ಎಷ್ಟು? ಒಂದು ರೂಪಾಯಿಗೆ ಒಂದು ಕೆ.ಜಿ.ಅಕ್ಕಿ ಕೊಟ್ಟರೆ ಲೇವಡಿ ಮಾಡುತ್ತೀರಿ, ಬೇರೆ ಏನಾದರೂ ಒಂದು ಸಣ್ಣ ಸಹಾಯ ಮಾಡಿದರೆ ಗೇಲಿ ಮಾಡುತ್ತೀರಿ, Just because people-- get organized can the public

exchequer be used like this to their whims and fancies ? Where are we going ? I would like the Hon 'ble Education Minister to highlight on all aspects . Till then, as they pleaded ,ಬೇಕಾದರೆ you can Withhold the Bill without discussion Without all the information supplied to all the Hon ' ble members , enable us to participate and take a decision . We have been bestowed with this responsibility by the electors when we are sent to this House, We cannot abdicate that responsibility. Please come to our rescue sir.

ಉಪಾಧ್ಯಕ್ಷರು:- O.K., ಶಿವಲಿಂಗೇಗೌಡರೆ ಈಗ ನೀವು ಮಾತನಾಡಿ,

ಶ್ರೀ ಕೆ.ಎಂ.ಶಿವಲಿಂಗೇಗೌಡ(ಅರಸೀಕೆರೆ):- ಮಾನ್ಯ ಉಪಾಧ್ಯಕ್ಷರೆ, ನಾನು ಹೇಳಬೇಕೆಂದಿದ್ದ ಎಲ್ಲ ವಿಚಾರಗಳನ್ನೂ ರಮೇಶ್ ಕುಮಾರ್‌ರವರು ಹೇಳಿಬಿಟ್ಟರು. ಹಿಂದೆ grant - in - aid ಎನ್ನುವುದನ್ನು ಯಾವಾಗ ಸರ್ಕಾರ ಪುರಸ್ಕರಿಸಿತೋ, ಆಗ ಯಾವ ಸರ್ಕಾರವಿತ್ತೋ ನನಗೆ ಗೊತ್ತಿಲ್ಲ. ಅವತ್ತು ಯಾರು ಅಧಿಕಾರದಲ್ಲಿದ್ದರೋ ಅದು ನನಗೆ ಗೊತ್ತಿಲ್ಲ. ಅವತ್ತೇ ತಪ್ಪಾಗಿದೆ. ಅದನ್ನು ಪುರಸ್ಕಾರ ಮಾಡತಕ್ಕಂಥ ಸ್ಥಿತಿಗೆ ಬಂದಾಗ ಇವತ್ತೇನು ಅವರು ಸುಪ್ರೀಂ ಕೋರ್ಟಿಗೆ ಹೋಗಿ ತಮ್ಮ ಅಹವಾಲುಗಳನ್ನು ಹೇಳಿ ಕೊಂಡಿದ್ದಾರೋ, ಬಹುಶಃ ಹಿಂದೆಯೇ ಅವರಿಗೆ ಕೆಲವೊಂದು conditions ಹಾಕಿ grant-in-aid ಮಾಡಬಹುದಾಗಿತ್ತು. ಆಗ ಆ ರೀತಿ ಮಾಡತಕ್ಕಂಥ ಪರಿಸ್ಥಿತಿಗೆ ಹೋಗಲಿಲ್ಲ. grant-in-aid ಆದ ತಕ್ಷಣ ಎಲ್ಲ ಸವಲತ್ತುಗಳನ್ನು ಕೊಡಬೇಕೆಂದು ಸುಪ್ರೀಂ ಕೋರ್ಟ್ ಆದೇಶ ಕೊಟ್ಟಿದೆಯೆಂದು ಈಗ ಹೇಳುತ್ತಿದ್ದಾರೆ. ಕೊಡಬೇಕು ಎಂದು ಹೇಳಿದ ಮೇಲೆ ವೇತನ ತಾರತಮ್ಯವನ್ನು ಹೋಗಲಾಡಿಸಲು ಹೆಚ್ಚುವರಿ ಹಣವನ್ನು ಅವರಿಗೆ ಕೊಡಬೇಕು

ಎನ್ನತಕ್ಕಂಥದ್ದು ಬರುತ್ತದೆ. ಇದನ್ನು ಕೇಳುವುದಿಲ್ಲವೆನ್ನುವುದಕ್ಕೆ ಗ್ಯಾರಂಟಿ ಏನು? ಆಗ 4 ಸಾವಿರ ಕೋಟಿ ರೂ. ಗಳನ್ನು ಸರ್ಕಾರ ಎಲ್ಲಿಂದ ತರುತ್ತದೆ? ಸರ್ಕಾರ ಸುಪ್ರೀಂ ಕೋರ್ಟಿನ ಆದೇಶವನ್ನು ಒಪ್ಪಿಕೊಂಡ ಮೇಲೆ ಯಾವುದೇ ಕಾರಣದಿಂದ ಈ ಹಣವನ್ನು ಕೊಡಬೇಕೆನ್ನುವುದನ್ನು ಒಪ್ಪಿ ಕೊಳ್ಳಲೇಬೇಕಾಗತಕ್ಕಂಥ ಪರಿಸ್ಥಿತಿ ಬರುತ್ತದೆ. ಇಂಥ ಸಂದಿಗ್ಧ ಪರಿಸ್ಥಿತಿಗೆ ತಂದು ಈಗ grant in - aid ನಿಂದ ಈ ರಾಜ್ಯಕ್ಕೆ ಏನು ಅನುಕೂಲವಾಗಿದೆ? ಆ ಸಂಸ್ಥೆಗಳಿಂದ ಏನೇನು ಮತ್ತು ಯಾರು ಯಾರಿಗೆ ಅನುಕೂಲವಾಗಿದೆ ಎಂಬ ಬಗ್ಗೆ ಸವಿಸ್ತಾರವಾದಂಥ ಚರ್ಚೆ ಈಗ ಬೇಡ. ಶಿವಮೂರ್ತಿಯವರು ಅವರೊಂದು ಕಡೆ ಹೇಳಿದರು, ಆ grant - in - aid schools ಏನೇನಾಗಿವೆ? ಯಾವ ಪರಿಸ್ಥಿತಿಯಲ್ಲಿವೆ.? ಇವತ್ತು ಆ grant - in - aid Schools ಗೆ ಕುರ್ಚಿ, ಬೆಂಚ್‌ಗಳಿಲ್ಲ. ಯಾರೋ ಒಬ್ಬ ಮಾಲೀಕ ಅದನ್ನು ಮಾಡಿದ. ಅದರಿಂದ ಬರುವ ಎಲ್ಲ ಸವಲತ್ತುಗಳನ್ನು ತಿಂದ, ತಿಂದು ಆ ಸ್ಕೂಲ್‌ಗೆ ಟೀಚರ್ಸ್‌ಗಳನ್ನೂ ಕೂಡ ನೇಮಕ ಮಾಡಿಬಿಟ್ಟ. ಅವರ ಹತ್ತಿರ ದುಡ್ಡು ಕಿತ್ತುಕೊಂಡ. ಆದರೆ ಈಗ ಆ ಟೀಚರ್ಸ್‌ಗಳು ಕುರ್ಚಿ ಬೆಂಚುಗಳನ್ನು ಹುಡುಕುತ್ತಿದ್ದಾರೆ, ಶಾಲೆಯ ಮೇಲ್ಛಾವಣಿ ಸರಿಯಿಲ್ಲದೆ ಹೆಂಚುಗಳನ್ನು ಹುಡುಕುತ್ತಿದ್ದಾರೆ. ಯಾರಾದರೂ ಒಂದಿಷ್ಟು ಹೆಂಚುಗಳನ್ನು ಕೊಡಿಯಪ್ಪಾ, ಸ್ಕೂಲ್‌ನಲ್ಲಿ ಮಳೆ ಬಂದಾಗ ಸೋರುತ್ತದೆಂದು ಹೇಳುತ್ತಿದ್ದಾರೆ. ನಾವು ಶಾಲೆ ನಡೆಸಲೇಬೇಕು. ಏಕೆಂದರೆ ನಮ್ಮ ವೇತನ ಉಳಿಯಬೇಕು, ನಮ್ಮ ವೃತ್ತಿ ನಮ್ಮ ಕೆಲಸವನ್ನು ಉಳಿಸಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆಯೆನ್ನುತ್ತಾರೆ. ಇಂಥ ಪರಿಸ್ಥಿತಿ ಇವತ್ತಿನ grant - in - aid school ಗಳಿಗೆ ಬಂದಿರತಕ್ಕಂಥದ್ದು. ಇನ್ನು ಕೆಲವು ಶ್ರೀಮಂತ ವರ್ಗದವರು grant-in-aid School ಗಳನ್ನು ನಡೆಸ ತಕ್ಕಂಥದ್ದೇ ಬೇರೆ ಇವೆ. ಬಡ ವರ್ಗದ ಜನ ಗ್ರಾಮೀಣ ಪ್ರದೇಶದಲ್ಲಿ ಶಾಲೆ ತೆಗೆಯತಕ್ಕಂಥ ಕೆಲಸವನ್ನು ಮಾಡಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ

ಕೊಡಬೇಕು ಎನ್ನತಕ್ಕಂಥ ಭಾವನಾತ್ಮಕ ಚಿಂತನೆಯನ್ನು ಯಾರು ಯಾರು ಮಾಡಿದ್ದರೋ ಅಂಥ ಶಾಲೆಗಳೆಲ್ಲಾ ಇವತ್ತಿನ ದಿವಸ ಅಧೋಗತಿಗೆ ಹೋಗುತ್ತಿದೆ, ಅಲ್ಲಿ ಏನೇನು ರಾಜಕೀಯ ಸೃಷ್ಟಿಯಾಗಿದೆ, ಯಾರು ಯಾರು ಆ ಬೋರ್ಡ್‌ಗೆ ಹಿಂದೆ ಅಧ್ಯಕ್ಷರು, ಕಾರ್ಯದರ್ಶಿಯಾಗುವುದಕ್ಕೆ ಯಾವ ರೀತಿಯಾಗಿ ಆ ಸ್ಕೂಲನ್ನೇ ಹಾಳು ಮಾಡಿದ್ದಾರೆ ಎನ್ನುವುದಕ್ಕೆ ಹತ್ತಾರು ಉದಾಹರಣೆಗಳನ್ನು ನಾವು ಇವತ್ತು ಕೊಡಬಹುದು. ನನ್ನ ಕ್ಷೇತ್ರದಲ್ಲಿ ಸುಮಾರು 15 grant - in - aid school ಗಳಿವೆ. ಆ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡರೆ ಗೊತ್ತಾಗುತ್ತದೆ. ಆದರೆ ಇವತ್ತು ಸುಪ್ರೀಂ ಕೋರ್ಟಿನ ಆದೇಶವನ್ನು ನೀವು ಪೂರ್ಣ ಪ್ರಮಾಣದಲ್ಲಿರುವ ಅದರಲ್ಲೇನೇನು ಇದೆ ಎಂಬ ಬಗ್ಗೆ ಈ ಸದನಕ್ಕೂ ಕೂಡ ಮಾಹಿತಿಯನ್ನು ಕೊಡುವುದಿಲ್ಲ. ಸುಪ್ರೀಂ ಕೋರ್ಟ್ ಇಂಥ ಆದೇಶವನ್ನು ನೀಡಿದೆ, ಇದು ಅಂತಿಮವಾದಂಥ ಆದೇಶ. ಇದರ ಬಗ್ಗೆ ನಾವು ಯಾವ ರೀತಿಯಾಗಿ ತೀರ್ಮಾನವನ್ನು ತೆಗೆದು ಕೊಳ್ಳಬೇಕು ಎನ್ನತಕ್ಕಂಥದ್ದರ ಬಗ್ಗೆ ಸದಸ್ಯರ ಗಮನಕ್ಕೂ ಕೂಡ ತರದೇ ಈಗ ಅದರ ನಿಯಂತ್ರಣದ ಕಾನೂನನ್ನು ತರತಕ್ಕಂಥದ್ದರಲ್ಲಿ ಎಲ್ಲೋ ಒಂದು ಕಡೆ ಅಸಮಾಧಾನವಿದೆ. ಆದುದರಿಂದ ಹಿಂದೆಯೇ grant-in-aid ಕೊಡುವಾಗ ಅವರು ಏನು ಬೇಕಾದರೂ ಬರೆದುಕೊಡುವುದಕ್ಕೆ ಆಗ ತಯಾರಿದ್ದರು. ನಮಗೇನೂ ಬೇಡ, ಕೇವಲ grant - in - aid ಗೆ ಅಳವಡಿಸಿ ಎಂಬುದನ್ನು ಮಾತ್ರ ಹೇಳುವುದಕ್ಕೆ ತಯಾರಿದ್ದರು. ಅವತ್ತೇ ನೀವು ಅವರ ಕಡೆಯಿಂದ ಬರೆಸಿಕೊಂಡಿದ್ದರೆ ಇವತ್ತು ಅವರು ಯಾವ ಕೋರ್ಟಿಗೂ ಹೋಗುತ್ತಿರಲಿಲ್ಲ. ಇವತ್ತು ಅವರಿಗೆ ಎಲ್ಲವನ್ನೂ ಕೊಟ್ಟು, ಹಿಂದೆಯೇ ನೀವು ಅವರ ಜೊತೆ ಸಂಧಾನದ ಮುಖಾಂತರ ಅವರು ಸುಪ್ರೀಂ ಕೋರ್ಟ್‌ಗೆ ಹೋಗುವುದನ್ನು, ಹೈಕೋರ್ಟ್‌ಗೆ ಹೋಗುವುದನ್ನು ತಡೆದಿದ್ದರೆ, ಕಾನೂನಿನ ಸಮರಕ್ಕೆ ಹೋಗುವುದನ್ನು ತಡೆದಿದ್ದರೆ, ಸಂಘದವರ ಜೊತೆ ಸಮಾಲೋಚನೆಯನ್ನು

ಮಾಡಿದ್ದರೆ ಬಹುಶಃ ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲವೆನ್ನುವುದು ನನ್ನ ಭಾವನೆ. ಅದಕ್ಕೋಸ್ಕರ ಈಗಲೂ ಕೂಡ ನನ್ನ ಭಾವನೆಯಿರತಕ್ಕಂಥದ್ದೇನೆಂದರೆ, ಯಾರು ಹೈ ಕೋರ್ಟಿನಲ್ಲಿ Writ Petition ಹಾಕಿದ್ದಾರೋ ಅವರ ಜೊತೆಯಲ್ಲಿ ಸಂಧಾನ ಮಾಡುವುದು ಸೂಕ್ತವಿದೆ. ತದನಂತರದಲ್ಲಿ ಈ ಕಾನೂನನ್ನು ತರತಕ್ಕಂಥದ್ದು ಸೂಕ್ತ ಎನ್ನತಕ್ಕಂಥ ಅಭಿಪ್ರಾಯವನ್ನು ನಾನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಸಿ.ಟಿ.ರವಿ(ಚಿಕ್ಕಮಂಗಳೂರು):- ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ಎರಡ್ಮೂರು ಸಂಶಯಗಳು ನನಗಿದೆ. ಮೊದಲನೆಯದಾಗಿ ಮೊದಲು grant - in - aid ಯಾವಾಗಿನಿಂದ ಪ್ರಾರಂಭವಾಯಿತು? ಆಗ ಏನು Conditions ಇತ್ತು? ಆಗ ಅವರು jobಗೆ ಸೇರಿದ ದಿನಾಂಕದಿಂದ ಸೇವಾ ಅವಧಿಯನ್ನು ಪರಿಗಣಿಸಲಾಗಿದೆಯೋ? ಅಥವಾ grant-in-aid ಕೊಟ್ಟ ದಿನಾಂಕದಿಂದ ಪರಿಗಣಿಸಲಾಗಿದೆಯೋ? ಎನ್ನುವುದು ನನಗೆ ಸ್ಪಷ್ಟವಾಗಬೇಕು. ಶೈಕ್ಷಣಿಕ ವಲಯ ಬಿಟ್ಟು ಬೇರೆ ಬೇರೆ ಇಲಾಖೆಗಳೇನಿವೆ, ಆ ಬೇರೆ ಇಲಾಖೆಗಳಲ್ಲಿ ನಾವು 10 ವರ್ಷ ಕೆಲಸ ಮಾಡಿದವರನ್ನು, 15 ವರ್ಷ ಕೆಲಸ ಮಾಡಿದವರನ್ನು, 20 ವರ್ಷ ಕೆಲಸ ಮಾಡಿದವರನ್ನು ಖಾಯಂಗೊಳಿಸಿದ್ದೇವೆ. ಆ ರೀತಿ ಖಾಯಂಗೊಳಿಸಬೇಕಾದರೆ ಅವರ ಹಿಂದಿನ ಸೇವಾ ಅವಧಿಯನ್ನು ಪರಿಗಣನೆಗೆ ತೆಗೆದುಕೊಂಡಿದ್ದೇವೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಕೆಲವರು daily Wages ನಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ service benefits ಏನು ಕೊಟ್ಟಿದ್ದೇವೆ. ಅವರಿಗೆ ಖಾಯಂ ಮಾಡಿದ ದಿನದಿಂದ service benefits ಕೊಟ್ಟಿದ್ದೇವೋ ಅಥವಾ previously ಅವರು ಕೆಲಸಕ್ಕೆ ಸೇರಿದ ದಿನಾಂಕದಿಂದ ಕೊಟ್ಟಿದ್ದೇವೋ ಎಂಬುದನ್ನು ನೋಡಬೇಕು. ಕೆಲವರು daily wages ನಲ್ಲಿ, ಗುತ್ತಿಗೆಯಾಧಾರದಲ್ಲಿ ಕೆಲಸ ಮಾಡುತ್ತಿದ್ದರು,

ಅವೆಲ್ಲವನ್ನೂ ಪರಿಗಣಿಸಲಾಗಿದೆಯೇ ಎಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ ಒಂದು ಇಲಾಖೆಯಲ್ಲಿ ಒಂದು ತರಹ ಮತ್ತೊಂದು ಇಲಾಖೆಯಲ್ಲಿ ಮತ್ತೊಂದು ತರಹ ಎಂದು ಮಾಡುವುದಕ್ಕೆ ಬರುವುದಿಲ್ಲ. ಇನ್ನು ಮೂರನೆಯದಾಗಿ ಸುಪ್ರೀಂ ಕೋರ್ಟಿಗೆ ಹೋಗುವಂಥ ಪರಿಸ್ಥಿತಿ ಏಕೆ ಬಂತು? ಕೇವಲ ಬೊಕ್ಕಸಕ್ಕೆ ಹೊರೆ ಬರುತ್ತದೆ ಎಂಬುದನ್ನಾಧರಿಸಿ ಅವರ ಹಕ್ಕನ್ನು ಮೊಟಕುಗೊಳಿಸತಕ್ಕಂಥ ಕೆಲಸವನ್ನು ಮಾಡುತ್ತಿದೆಯೆ? ತಾರತಮ್ಯ ಮಾಡುತ್ತಿದೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು. ಒಬ್ಬರಿಗೊಂದು ಮತ್ತೊಬ್ಬರಿಗೊಂದು ಎಂದು ಮಾಡುವುದಕ್ಕೆ ಬರುವುದಿಲ್ಲ. ಆದುದರಿಂದ ಇವುಗಳ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮತ್ತು ಹಲವಾರು ಗೌರವಾನ್ವಿತ ಸದಸ್ಯರುಗಳು ಮಾತನಾಡಿ ಇದರ ಬಗ್ಗೆ ಇನ್ನೂ ಹೆಚ್ಚಿನ ಬೆಳಕನ್ನು ಚೆಲ್ಲಬೇಕೆಂದು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮುಖ್ಯವಾಗಿ triple benefit scheme ಏನಿತ್ತು ಆ ಒಂದು ಸ್ಕೀಂ ಕೆಳಗೆ ಕೆಲವು conditions ಇತ್ತು. ಆ ಪ್ರಕಾರ ಈ grant - in - aid ಏನು ಕೊಡಬೇಕಾಗಿದೆ ಅದು aided service ಗೆ ಅಷ್ಟೆ. ಅಂದರೆ ಯಾವ ದಿನಾಂಕದಿಂದ ನಾವು grant - in - aid ಮಂಜೂರು ಮಾಡಿದ್ದೇವೋ ಆ ದಿನಾಂಕದಿಂದ ಅವರಿಗೆ benefits ಸಿಗಬೇಕೇ ಹೊರತು ಆ institutionಗೆ ಅವರು join ಆದ ದಿನಾಂಕದಿಂದಲ್ಲ. ಈ ವಿಚಾರದಲ್ಲಿ 2001 ನೇ ಇಸವಿಯಲ್ಲಿ ಎಂ.ಸಿ. ಸಂಜೀವರವರು ಕರ್ನಾಟಕದ ಹೈಕೋರ್ಟ್‌ನಲ್ಲಿ Writ file ಮಾಡಿದರು. ಅವರು ಕೇಳಿದ್ದೇನೆಂದರೆ ನಮಗೆ ಯಾವ ದಿನ ಸರ್ಕಾರ grant - in - aid

ಮಂಜೂರು ಮಾಡಿದೆಯೋ ಆಗಿನಿಂದ benefits ಸಿಗುತ್ತಿದೆ. ಆದರೆ ನಮಗೆ ಯಾವ ದಿನ ನಾವು ಆ ಸಂಖ್ಯೆಯಲ್ಲಿ join ಆಗಿದ್ದೇವೋ ಆ ದಿನಾಂಕದಿಂದಲೇ With retrospective effect benefits ಕೊಡಬೇಕೆಂದರು. ಆಗ managementಗೆ maintenance ಕೊಟ್ಟಿದ್ದೆವು. ಅದರ ನಂತರ 1977 ನೇ ಇಸವಿಯಲ್ಲಿ ನೇರವಾಗಿ ಶಿಕ್ಷಕರಿಗೆ ಸಂಬಳವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದೆವು. ಏಕೆಂದರೆ ಹಲವಾರು ಸಮಸ್ಯೆಗಳು ಈ ವಿಚಾರವಾಗಿ ಬಂದಿತ್ತು. ಈಗ ಅವರು ಕೇಳುವುದೇನೆಂದರೆ grant-in-aid ಅನ್ನು ಯಾವ ದಿನಾಂಕದಂದು ನಾವು Service ಗೆ join ಆಗಿದ್ದೇವೋ ಆ ದಿವಸದಿಂದ ಕೊಡಿ.ಎಂದು, increment calculation ಕೂಡ ಆಗಿನಿಂದ ಮಾಡಿ, pension benefits ಆಗಿನಿಂದ ಮಾಡಿ ಕೊಡಿ ಎಂದು ಕೇಳುತ್ತಿದ್ದಾರೆ. High Courtನಲ್ಲಿ ಒಂದು Writ Appealನಲ್ಲಿ ಸರ್ಕಾರಕ್ಕೆ ಒಳ್ಳೆಯದಾಗಿಲ್ಲ. Supreme Courtನಲ್ಲಿ Special Leave Petition ಹೋದಾಗ Supreme Courtನವರು ಕೇವಲ ಇಷ್ಟೆ ಬರೆದರು ಅದೇನೆಂದರೆ' Delay condoned, Special Leave Petition is dismissed'. ಹಾಗಾಗಿ ಮಾನ್ಯ ಕಾಗೇರಿಯವರು, ಮಾನ್ಯ ರಮೇಶ್ ಕುಮಾರ್ ಹಾಗೂ ಮಾನ್ಯ ಶಿವಮೂರ್ತಿಯವರು ಹೇಳಿದ ಹಾಗೆ ಇವತ್ತು grant-in-aid ವಿಚಾರದಲ್ಲಿ ಏನಾಗಿದೆ ಎಂದರೆ grant-in-aid ಯಾರಿಗೆ ಕೊಡಬೇಕು? Grant- in - aid ಯಾರಿಗೆ ಸಿಗಬೇಕೆಂದು ನಿರ್ಣಯವಾಗಬೇಕು. ಇವತ್ತು ಶಿಕ್ಷಣದ ವಿಚಾರದಲ್ಲಿ primary or higher education ಇರಲಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ಜನಾಂಗ, ಅಲ್ಪಸಂಖ್ಯಾತರು ಇನ್ನೂ ಬಹಳ ಹಿಂದಿದ್ದಾರೆ. ಇವತ್ತು 18 ರಿಂದ 25 ವರ್ಷದವರೆಗಿನ 70 ಲಕ್ಷ ಯುವಕರು ಏನಿದ್ದಾರೆ ಅವರಲ್ಲಿ ಕೇವಲ 17ಲಕ್ಷ ಯುವಕರು higher education benefit ತೆಗೆದುಕೊಳ್ಳುತ್ತಿದ್ದಾರೆ . ಈಗ ಒಂದು cabinet sub - committee ಮಾಡಿದ್ದಾರೆ. ಇನ್ನು ಮುಂದೆ ನಾವು grant - in - aid ಕೊಡುವಾಗ regulations and

ಪಾರದರ್ಶಕವಾಗಿರಬೇಕು, discretion ಇರಬಾರದು . ಅದು ಬೇರೆ ವಿಚಾರ . ತಾವು Cabinet Sub - Committee ವಿಚಾರ ಪ್ರಸ್ತಾಪ ಮಾಡಿದ್ದರಿಂದ ನಾನು ಹೇಳುತ್ತಿದ್ದೇನೆ. ಇವತ್ತು ಮುಖ್ಯವಾಗಿ ಸದನದಲ್ಲಿ ಏನು ವಿಚಾರ ಮಾಡಬೇಕೆಂದರೆ ಶಿಕ್ಷಕರಿಗೆ ಏನಾದರೂ ಸರ್ಕಾರದಿಂದ ಅನ್ಯಾಯವಾಗಿದೆಯೆ? ನಾನು ಇದಕ್ಕೆ ಸಂಬಂಧಪಟ್ಟಂತೆ figures ಇದೆ, ಅದನ್ನು ಕೊಡುತ್ತೇನೆ. ಇವತ್ತು Primary education ನಡಿಯಲ್ಲಿ aided institution ನ 62,222 ಶಿಕ್ಷಕರು grant-in-aid ಲಾಭ ಪಡೆದುಕೊಳ್ಳುತ್ತಿದ್ದಾರೆ. ನಮ್ಮ ಸರ್ಕಾರಿ aided college 3,444, polytechnic 1,500, engineering College 500 ರಲ್ಲಿ ಒಟ್ಟು 67,500 ಶಿಕ್ಷಕರು ಪ್ರಾಥಮಿಕ ಮತ್ತು ಉನ್ನತ ಶಿಕ್ಷಣ ಇಲಾಖೆಯಲ್ಲಿ aidedನ ಲಾಭ ತೆಗೆದುಕೊಳ್ಳುತ್ತಿದ್ದಾರೆ. ಈಗ ನಾನು ಏನು ಕೇಳುತ್ತೇನೆಂದರೆ ಇವರಿಗೆ ಏನು ಅನ್ಯಾಯವಾಗಿದೆ? ಸರ್ಕಾರ ಏನು ಆಜ್ಞೆ ಮಾಡುತ್ತಾ ಹೋದೆವೋ ಆ ಆಜ್ಞೆ ಪ್ರಕಾರ ಎಲ್ಲಾ benefit ಕೊಟ್ಟಿದ್ದೇವೆ. ಆದರೆ ಈಗ ನಮಗೆ retrospective effect ಕೊಡಿ ಎಂದು ಹೇಳುತ್ತಿದ್ದಾರೆ. ಯಾವ ದಿನದಿಂದ grant in - aid ಆ institution apply ಆಗಿಲ್ಲ ನಮ್ಮ service ಅನ್ನು ಆವಾಗಿನಿಂದ Count ಮಾಡಿ, ನಮ್ಮ increment, ಐದು ವರ್ಷಕ್ಕೆ ಏನು promotion ಕೊಡುತ್ತೀರೋ ಅದನ್ನು ಕೊಡಿ ಎಂದು ಕೇಳುತ್ತಿದ್ದಾರೆ. ಹಾಗಾಗಿ ನಮ್ಮ ಎರಡೂ ಇಲಾಖೆಗಳು ನ್ಯಾಯವಾಗಿ calculate ಮಾಡಿದಾಗ primary education ಮೇಲೆ 4,200ಕೋಟಿ ರೂಪಾಯಿ, higher education ಮೇಲೆ 150 ಕೋಟಿ ರೂಪಾಯಿಯವರೆಗೆ burden ಬರಬಹುದು ಎಂದು ಅಂದಾಜು ಮಾಡಿದ್ದಾರೆ. 2–3 ಕೋಟಿ ಹೆಚ್ಚುಕಡಿಮೆಯಾಗುವ ಸಾಧ್ಯತೆ ಇದೆ. ಇಲ್ಲಿ ಪ್ರಶ್ನೆ ಇರುವುದೇನೆಂದರೆ, ತಾವು ಇಲ್ಲಿ ಚರ್ಚೆ ಮಾಡುವಾಗ ಹೇಳುತ್ತಿದ್ದೀರಿ. ನಮ್ಮದೇನೂ ವಿರೋಧವಿಲ್ಲ. ಹಲವಾರು ಬಾರಿ ಸರ್ಕಾರದಿಂದ ಅವರನ್ನು ಕರೆಸಿ ಚರ್ಚೆ ಮಾಡಿದ್ದೇವೆ.

ನಾವು 15–20 ದಿವಸದ ಹಿಂದೆ ಎಲ್ಲಾ aided and un - aided institutions ಕರೆದು ವಿಷಯಗಳ ಬಗ್ಗೆ ಚರ್ಚೆ ಮಾಡಿ ಹಲವಾರು ಸಮಸ್ಯೆಗಳನ್ನು ಇತ್ಯರ್ಥ ಮಾಡಿಕೊಟ್ಟಿದ್ದೇವೆ. ಉದಾಹರಣೆಗೆ UGC, ಈ UGC arrears 2006 ರಿಂದ ಕೊಡಬೇಕಾಗಿತ್ತು. ಈ ಸರ್ಕಾರ ಬಂದ ನಂತರ ಮೊನ್ನೆ 165 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಇವತ್ತು ಅತಿಥಿ ಉಪನ್ಯಾಸಕರು ಧರಣಿ ಮಾಡುತ್ತಿದ್ದಾರೆ. ಅವರು ಏಕೆ ಮಾಡುತ್ತಿದ್ದಾರೆಂದು ನಾನು ಕೇಳುವುದಿಲ್ಲ. ಆದರೆ ಅವರಿಗೆ ಮೂರು ವಾರ ಸಂಬಳ ಸಿಕ್ಕಿಲ್ಲ. ಅವರಿಗೆ 53 ಕೋಟಿ ರೂಪಾಯಿ payment ಮಾಡಿದ್ದೇವೆ. ಜೊತೆಗೆ ಅವರಿಗೆ ಪ್ರತಿ ತಿಂಗಳು ಗೌರವ ಧನ ಸಿಗುತ್ತಿದೆ. ಅವರ ಬೇಡಿಕೆ ಸೂಕ್ತವಾಗಿದೆ. ಅದನ್ನು ಪರಿಶೀಲನೆ ಮಾಡುತ್ತೇನೆಂದು ಮೇಲ್ಮನೆಯಲ್ಲಿ ಹೇಳಿದ್ದೇನೆ. ಇವತ್ತು ಕೂಡ ಹೇಳುತ್ತಿದ್ದೇನೆ ಅವರು ಮುಷ್ಕರ ಹಿಂತೆಗೆದುಕೊಳ್ಳಬೇಕು, ನಾನು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತೇನೆ. ಆದರೆ ಇಲ್ಲಿ ಪ್ರಶ್ನೆ ಏನಿದೆ ಎಂದರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಇಲ್ಲಿ arrears ಪ್ರಶ್ನೆ ಬರುವುದಿಲ್ಲ ಎಂದು ಹೇಳಿದರು ಹೌದಲ್ಲ ? ನಾನು ನಿಮಗೆ ಒಂದು judgment ಓದಿ ಹೇಳುತ್ತೇನೆ. ಇದು Writ Petition No. 18224 of 2011, H. Nagarajappa, V / s A .N. Krishnamurthy and others. ಇಲ್ಲಿ ಏನು ಹೇಳುತ್ತಾರೆಂದು ಕೇಳಿ,

" Since on a similar question this court has taken a consisted view in several petitions holding that such lecturers are entitled to the benefit of the fixation of salary from the date of their initial appointment and not necessarily from the date that college was admitted to grant - in - aid ".

ನಾವು ಏನು ಹೇಳುತ್ತಿದ್ದೇವೆ, ಕಾಲೇಜ್ ಯಾವಾಗ grant - in - aid ಗೆ admit ಆಯಿತು ಆಗ ತೆಗೆದುಕೊಳ್ಳುತ್ತಿದ್ದೇವೆ. ಅದರ ಬಗ್ಗೆ ಯಾವುದೇ dispute ಇಲ್ಲ. ಮೊದಲು ಯಾವಾಗ grant - in - aid ನಲ್ಲಿ ಇರಲಿಲ್ಲ. ಆಗ ಕೊಡುವುದಕ್ಕೆ ಇರುವಂತಹ ಆದೇಶ. ಮುಂದೆ ಏನು?

" The present petition stands allowed . Annexure - B and D by which such a benefit is denied to the petitioner is hereby quashed . The respondents are directed to take into account the past service of the petitioners from date of their respective appointments till the passing of the impugned orders for the purpose of fixation of pay revision , fixation of pay with revision from time to time in the grade of lecturers along with arrears and pass suitable orders with in a period of eight Weeks ".

ಇದನ್ನು ತಾವು ಕೇಳಬೇಕು. ಇವರು Service ಅನ್ನು ಆ ದಿವಸದಿಂದ Count ಮಾಡಬೇಕೆಂದು ಹೇಳುತ್ತಾರೆ, ಅವರ salary ಕೂಡ ಆಗಿನಿಂದ fix ಮಾಡಬೇಕೆಂದು ಹೇಳುತ್ತಾರೆ, arrears ಕೊಡಬೇಕೆಂದು ಹೇಳುತ್ತಾರೆ, this is the court order . . ಇಷ್ಟು clear ಆಗಿ Court order ಇದ್ದಾಗ ಸರ್ಕಾರ ವಿಚಾರ ಮಾಡಬೇಕಾಗುತ್ತದೆ. 200 contempt petitions are filed against us , ಇವತ್ತು ಸರ್ಕಾರದಿಂದ aided institution ಶಿಕ್ಷಕರಿಗೆ ಏನಾದರೂ ಅನ್ಯಾಯ ಆಗಿದ್ದರೆ, ತಾವು ಕೇಳಬಹುದು. ಸರ್ಕಾರದಿಂದ ಏನು ಬೆನಿಫಿಟ್ ಕೊಡುತ್ತಾ ಬಂದಿದ್ದಾರೆ ಅದನ್ನು ಕೊಡುತ್ತಲೇ ಬಂದಿದ್ದಾರೆ. 1970ಕ್ಕಿಂತ ಮುಂಚೆ ಏನು ಈ ಬೆನಿಫಿಟ್ ಕೊಟ್ಟಿದ್ದರು, we are not going to Withdraw ಆ protection ಕೊಡುತ್ತಿದ್ದೇವೆ. ಈಗ ಅವರು High Court Writ

Appeal order ಪ್ರಕಾರ ಕೇಳುತ್ತಿದ್ದಾರೆ, ಆದು ಸರಿಯಲ್ಲ. ಅದು ನಾಡಿನ ಬೊಕ್ಕಸಕ್ಕೆ ಒಳ್ಳೆಯದಲ್ಲ. ಶಿಕ್ಷಕರಿಗೆ ಅದನ್ನು ಕೇಳುವ ಅಧಿಕಾರ ಇಲ್ಲ. ಏಕೆಂದರೆ ನಾವೇನು ಕೊಟ್ಟಿದ್ದೇವೆ, ಆದನ್ನು ಇಷ್ಟು ವರ್ಷ ತೆಗೆದುಕೊಳ್ಳುತ್ತಾ ಬಂದರು. ಅವರು 1974, 1975, 1978, 1980ನಲ್ಲಿ agitate ಮಾಡಬೇಕಾಗಿತ್ತು. ಏಕೆ ಮಾಡಲಿಲ್ಲ? ಹಾಗಾಗಿ grant - in - aid ಎನ್ನುವುದು. ದೊಡ್ಡ ಸಮಸ್ಯೆಯಾಗಿದೆ. ಏಕೆಂದರೆ ನಾನು Education Minister, ನಾನು ಯಾರಿಗೆ ಬೇಕು ಅವರಿಗೆ grant- in- aid ಕೊಡುತ್ತೇನೆಯೇ ವಿನಹ ಸರಿಯಾದ ಪಾರದರ್ಶಕತೆ ಇಲ್ಲ. ಹಾಗಾಗಿ ಇದರಲ್ಲಿ ಪಾರದರ್ಶಕತೆ ತರಲು cabinet sub -Committee ಆಗಿದ್ದು, ಇಲ್ಲಿ discretion ಇರಬಾರದು. ಎಲ್ಲಾ ಒಳ್ಳೆಯ institution ಇವೆ, ಆದು ಎಸ್‌ಸಿ–ಎಸ್‌ಟಿ ಇರಬಹುದು weaker section ಇರಬಹುದು, ಇತರೆ ಇರಬಹುದು, ನಾಲ್ಕು– accreditions ಇವೆ ಅವರ ಬಗ್ಗೆ ನಾನು ವಿಚಾರ ಮಾಡಬಹುದೇ ವಿನಹ ನಮ್ಮ whims and fancies ಪ್ರಕಾರ ನಾವು ಈ grant - in - aid ಗೆ ಕೊಡುವುದಾದರೆ ಇನ್ನು ಮುಂದೆ ಸರ್ಕಾರಕ್ಕೆ grant - in - aid ಕೊಡುವುದು ಕಷ್ಟವಾಗಬಹುದು. ಹಾಗಾಗಿ ಸರ್ಕಾರ ಇದರ ಬಗ್ಗೆ grant - in - aid ಕೊಡಬೇಕೋ ಬೇಡವೋ ಎಂದು ಮುನರ್ ಪರಿಶೀಲನೆ ಮಾಡಬೇಕಾಗುತ್ತದೆ. ನಾವು ಒಂದು ವೇಳೆ ಕೊಡುವುದಾದರೆ ಯಾರಿಗೆ ಕೊಡಬೇಕು? ಆ ದೃಷ್ಟಿಯಿಂದ ನಾನು ತಮಗೆ ವಿನಂತಿ ಮಾಡುತ್ತಿದ್ದೇನೆ. ಸರ್ಕಾರ ಇದನ್ನು ತರಾತುರಿಯಲ್ಲಿ ಮಾಡಿಲ್ಲ. 200 contempt petitions ಇವೆ. ಇಷ್ಟು ದೊಡ್ಡ ಭಾರವನ್ನು ಸರ್ಕಾರ ತೆಗೆದು ಕೊಂಡರೆ ಅದು ನಾಳೆ ಜನರ ಮೇಲೆ ಬೀಳುತ್ತದೆ, ಅದು ಯೋಗ್ಯವಿದ್ದರೆ, ಅದರಿಂದ ಲಾಭವಾಗುವುದಿದ್ದರೆ ಖಂಡಿತವಾಗಿ ಮಾಡುತ್ತೇವೆ. ಆದರೆ ಇದು ನನ್ನ ದೃಷ್ಟಿಯಲ್ಲಿ ನಾಡಿನ ಜನರಿಗೆ ಅಂದರೆ ವಿದ್ಯಾರ್ಥಿಗಳಿಗೆ ಯಾವುದೇ ಲಾಭವಾಗುವ ಪ್ರಶ್ನೆಯಿಲ್ಲ. ಹಾಗಾಗಿ ಸರ್ಕಾರ ಯಾವುದೇ ಬೆನಿಫಿಟ್ ವಾಪಸ್ಸು

ತೆಗೆದುಕೊಂಡಿಲ್ಲ. ಅವರು ಏನು ಕೇಳುತ್ತಿದ್ದಾರೆ, ಅದು ಸರಿಯಿಲ್ಲ. ಹಾಗಾಗಿ ಈ ಮಸೂದೆಯನ್ನು ತಂದಿದ್ದೇವೆ. ಇದಕ್ಕೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, ನಾನು ಆಂಧ್ರದ ಬಗ್ಗೆ ಉಲ್ಲೇಖ ಮಾಡಿದೆ.

ಶ್ರೀ ಆರ್.ವಿ.ದೇಶಪಾಂಡೆ : 2006 ರಲ್ಲಿ ಆಂಧ್ರದಲ್ಲಿ ಆ್ಯಕ್ಟ್ ಮಾಡಿ, ಅಸೆಂಬ್ಲಿಯಲ್ಲಿ ಪಾಸ್ ಮಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆಂಧ್ರ ಪ್ರದೇಶದಲ್ಲಿ ಇದೇ ರೀತಿ ಆ್ಯಕ್ಟ್ ಮಾಡಿದ್ದರು. ಆಮೇಲೆ ಶಿಕ್ಷಕರಿಂದ ಒಂದು ದೊಡ್ಡ ಹೋರಾಟವಾಯಿತು. ಆಮೇಲೆ cabinet sub - committee ಮಾಡಿದರು. ಆಮೇಲೆ ಅದಕ್ಕೆ ತಿದ್ದುಪಡಿಯನ್ನು ಮಾಡಿದರು. ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಮುಂದೆ ಆ ರೀತಿ ಮಾಡುವಂತಹ ಸಂದರ್ಭಗಳು ಬರುವುದು ಬೇಡ ಎಂದು ಹೇಳುತ್ತಿದ್ದೇನೆ. ಈಗಲೇ ನಿಮ್ಮ ಅಧ್ಯಕ್ಷತೆಯಲ್ಲಿ cabinet Sub - Committee ಏನಿದೆ, ಅಲ್ಲಿ ಕೂಲಂ ಕಷವಾಗಿ ಅವರು ಏನು ಮಾಡಿದ್ದಾರೆಂದು ಚರ್ಚೆ ಮಾಡಿ, ಅಲ್ಲಿ ಏನು ಮಾಡಿದ್ದಾರೆ ಅದನ್ನೇ ಇಲ್ಲಿ ಮಾಡಿದರೆ ಸಾಕೆಂದು ಶಿಕ್ಷಕರ ಸಂಘಟನೆಗಳು ಎಲ್ಲವೂ ಹೇಳುತ್ತಿವೆ.

ಶ್ರೀ ಆರ್.ವಿ.ದೇಶಪಾಂಡೆ : ಈ ಸರ್ಕಾರ ಯಾವುದೇ ಒಂದು ಕಾನೂನು ಮಾಡುವಾಗ ನಾಡಿನ ಹಿತ, ನಾಡಿನ ಜನರ ಹಿತ, ನಾಡಿನ ಬೊಕ್ಕಸದ ಬಗ್ಗೆ ಕೂಡ ನೋಡಬೇಕು. Tax is paid by the tax payers , ಈ ಹಣ ಯಾವ ರೀತಿ ವೆಚ್ಚ ಮಾಡಬೇಕೆನ್ನುವುದರ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಇತ್ತೀಚೆಗೆ 7–8 ತಿಂಗಳುಗಳಿಂದ ಅವರ ಹಲವಾರು ಬೇಡಿಕೆಗಳಿಗೆ ಸ್ಪಂದಿಸಿದ್ದೇವೆ. ಅವರ association ಜೊತೆ ಮಾತನಾಡಿ, ಏನು ಐದ್ಯೆದು ಹತ್ತತ್ತು ವರ್ಷಗಳಿಂದ ಏನು ಆಗಿಲ್ಲ, ಅದಕ್ಕೆ ಸ್ಪಂದಿಸಿ ಮಾಡಿಕೊಟ್ಟಿದ್ದೇವೆ. ನಾವು ಬಹಳ Transparent ಇದ್ದೇವೆ. ಶಿಕ್ಷಕರ ನ್ಯಾಯಬದ್ಧವಾದ ಬೇಡಿಕೆ aided or un - aided ಯಾವುದೇ ಇರಲಿ ಅದಕ್ಕೆ ಈ ಸರ್ಕಾರ ಸ್ಪಂದಿಸುತ್ತದೆಂದು ನಾನು ಭರವಸೆ ಕೊಡುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, ಈ ವಿಷಯದಲ್ಲಿ ಹೈಕೋರ್ಟ್‌ನಲ್ಲಿ ಸಾಕಷ್ಟು ಆದೇಶಗಳು ಆಗಿವೆ. ತಾವೂ ಒಂದು ಆದೇಶ ಓದಿದ ಹಾಗೆ ನಾನೂ ಒಂದು ಆದೇಶ ಓದಬಹುದು. High Courtನ ಬೇರೆ ಬೇರೆ ರೀತಿಯ ಆದೇಶಗಳು ಇವೆ. ಹಾಗಾಗಿ ಅದೆಲ್ಲವನ್ನು ಸಮಗ್ರವಾಗಿ ಅಧ್ಯಯನ ಮಾಡಿದ ನಂತರ ಅವರ ಜೊತೆ ಮಾತುಕತೆ ಮಾಡಿ, ಬೇರೆ ಎಲ್ಲೆಲ್ಲಿ ಏನೇನಾಗಿದೆ ಎನ್ನುವುದನ್ನು ನೋಡಿ, cabinet Sub Committeeನಲ್ಲಿ Supportive ಆಗಿ ಚರ್ಚೆ ಮಾಡಿ, ನಂತರದಲ್ಲಿ ಈ ಬಿಲ್ ತರುವುದು ಶಿಕ್ಷಕರ ಹಿತದೃಷ್ಟಿಯಿಂದ ಒಳ್ಳೆಯದು.

ನಾನು ಅದರ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. ಆದರೆ ಇಲ್ಲಿ ಈಗ ಕೊಡಬೇಕಾದಂಥ service benefit ವಿಷಯ ಏನಿದೆ. ಈಗ ಕಾಲ್ಪನಿಕ ವೇತನ, ಮುಂಬಡ್ತಿ/ಪದೋನ್ನತಿ ಮತ್ತು ಪಿಂಚಣಿ ಈ ಮೂರು ವಿಷಯಗಳಿವೆ. ಈ ಮೂರು ವಿಷಯಗಳಲ್ಲಿ ಯಾವ ರೀತಿಯ ನಿರ್ಧಾರವನ್ನು ತೆಗೆದು

ಕೊಳ್ಳಬೇಕೆಂಬುದರ ಬಗ್ಗೆ ತರಾತುರಿ ಮಾಡದೇ, ಇನ್ನಷ್ಟು ಸಮಗ್ರವಾಗಿ ಚರ್ಚೆ ಮಾಡಿ ಮಾಡಬೇಕೆಂದು ನಾನು ಮತ್ತೊಮ್ಮೆ ಆಗ್ರಹ ಮಾಡುತ್ತೇನೆ.

ಶ್ರೀ ಕೆ.ಶಿವಮೂರ್ತಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ದೇಶಪಾಂಡೆ ಯವರು ಮಾತನಾಡಿರುವಂಥದ್ದು ಸರಿ ಇದೆ. ಆದರೆ ಇದರಲ್ಲಿ ಆ ಪದಗಳು ಬರಲಿಲ್ಲವೆನ್ನುವಂಥದ್ದು, A disadvantaged groups . . .

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ SC/ST ಎಂದು ಇಲ್ಲ, ಈ Act aided institutions ಇದೆಯಲ್ಲಾ ಅವರು ಏನು Grant - in - aid ಕೇಳುತ್ತಿದ್ದಾರೆ, ಅದನ್ನು ಅವರು retrospective ಆಗಿ ಕೇಳುತ್ತಿದ್ದಾರೆ. ಇಲ್ಲಿ ಎಸ್.ಸಿ/ಎಸ್.ಟಿ, ಬ್ಯಾಕ್‌ವರ್ಡ್ ಪ್ರಶ್ನೆ ಇಲ್ಲ, ಸಂಸ್ಥೆಗಳು ಬ್ಯಾಕ್ವರ್ಡ್ ಇರಬಹುದು, ಎಸ್.ಸಿ/ಎಸ್‌ಟಿ, ಇರಬಹುದು ಯಾವುದೇ ಇರಬಹುದು, ಹಾಗಾಗಿ ನಾವು ಏನು ಹೇಳುತ್ತಿದ್ದೇವೆಂದರೆ ನಾವು ನ್ಯಾಯಬದ್ಧವಾಗಿ ನಿಮಗೇನು ಕೊಟ್ಟಿದ್ದೇವೆ, ಹಳೆಯದು ಏನು ಕೊಟ್ಟಿದ್ದೇವೆ ಆದನ್ನು recovery ಮಾಡುವುದಿಲ್ಲವೆಂದು ಈ Act ನಲ್ಲಿ provision ಇದೆ, ಅವರಿಗೆ ಆ ಭಯ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಉಪಾಧ್ಯಕ್ಷರೆ, ನನಗೆ ಒಂದು ವಿಷಯದ ಬಗ್ಗೆ clarification ಕೊಡಿ, ನಾನು ಇನ್ನು ಹೆಚ್ಚು ಚರ್ಚೆ ಮಾಡುವುದಿಲ್ಲ. ನಾವು 1990ನೇ ಇಸವಿಗಿಂತ ಮೊದಲು ಈ ಎಲ್ಲಾ benefit ಗಳನ್ನು ನಾವು ಕೊಟ್ಟಿದ್ದೇವೆ. ಆಮೇಲೆ 1990ನೇ ಇಸವಿಯಲ್ಲಿ ಸರ್ಕಾರ ಏನು ಆದೇಶ ಮಾಡಿತು, ಅಲ್ಲಿಂದ ಈ confusion ಬೆಳೆದಿರುವುದು. ಆದ್ದರಿಂದ ಅಲ್ಲಿಂದ ಕೊಟ್ಟಿದ್ದಿವೋ? ಇಲ್ಲವೂ ಕೊಟ್ಟಿದ್ದಿದ್ದರೆ ಅದನ್ನೇ High Court ಮತ್ತು Supreme Court upheld ಮಾಡಿದ್ದಿದ್ದರೆ ಅದು ಹೇಗೆ ತಪ್ಪಾಗುತ್ತದೆ? High

Court ಮತ್ತು Supreme Court ಸಹ ಈ ವಾದವನ್ನು ಸಾಕಷ್ಟು ಬಾರಿ ಆಲಿಸಿದೆ. ಅವರು ಏನು ಇದ್ದಕ್ಕಿದ್ದ ಹಾಗೆ judgment ಅನ್ನು ಕೊಡಲಿಲ್ಲ. ಅವರೂ ಸಹ ಸಾಕಷ್ಟು ಈ ವಿಷಯವಾಗಿ ವಾದಿಸಿದ್ದಾರೆ. 1990ನೇ ಇಸವಿಗಿಂತ ಮೊದಲು ಒಂದು ರೀತಿ ಕೊಡುವುದಕ್ಕೆ ಕಾನೂನಿನಲ್ಲಿ ಎಲ್ಲಿ ಒಪ್ಪಿಗೆ ಇದೆ? ಸಂವಿಧಾನದಲ್ಲಿ ಎಲ್ಲಿ ಒಪ್ಪಿಗೆ ಇದೆ? ಒಬ್ಬರಿಗೆ ಒಂದು ರೀತಿ ಒಂದಷ್ಟು ದಿವಸ ನೋಡುವುದು, ಮತ್ತೊಂದಷ್ಟು ದಿವಸ ಒಂದು ರೀತಿ ನೋಡುವುದು, ಇದಕ್ಕೆಲ್ಲಾ ಎಲ್ಲಿ ಅವಕಾಶ ಇದೆ? ಹಾಗಾಗಿ ನಾವು 1990ನೇ ಇಸವಿಗಿಂತ ಮೊದಲೆಲ್ಲಾ ಕೊಟ್ಟಿರುವುದು, ಹೌದೋ, ಅಲ್ಲವೋ ಎಂಬುದನ್ನು ಹೇಳಿ. ಆ ರೀತಿ ಕೊಟ್ಟಿರುವುದನ್ನು ಹೈಕೋರ್ಟ್, ಸುಪ್ರೀಂ ಕೋರ್ಟ್‌ಗಳು upheld ಮಾಡಿ, ಆ ರೀತಿ ಮುಂದುವರೆಸಿ ಎಂದು ಹೇಳಿದರೆ, ಕೋರ್ಟ್ ನ್ಯಾಯಯುತವಾಗಿ ಕೊಟ್ಟಿರುವುದು ನಿಜವೆಂದು ಅರ್ಥವಾಗುತ್ತದೆ.

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ, 1983ನೇ ಇಸವಿಯಲ್ಲಿ ಶಿಕ್ಷಣ ಕಾನೂನು ಜಾರಿಗೆ ಬಂತು. ಇದು implement ಆಗಿದ್ದು, ದಿನಾಂಕ: 01.06.1995ರಲ್ಲಿ. ಹಾಗಾಗಿ ನಾವು ಆ ಕಾನೂನು ಪ್ರಕಾರ ಹೋಗಬೇಕಲ್ಲಾ. ಇದೇ ಶಾಸನ ಸಭೆ ಅದಕ್ಕೆ ಮಾನ್ಯತೆಯನ್ನು ಕೊಟ್ಟಿದೆ. ಆ ಮಾನ್ಯತೆ ಪ್ರಕಾರ Section 145, Rule-3ರ ಪ್ರಕಾರ ನಾವು ಸ್ಯಾಲರಿ ಕೊಡಬೇಕು, ಯಾವ ಪ್ರಕಾರ ಎಂಬುದನ್ನು ನಾವು ನಿರ್ಧರಿಸಬೇಕು, ಹಿಂದಿನ service ಹೇಗೆ ನೋಡಬೇಕು, ಆ ಪ್ರಕಾರ ಮಾಡುತ್ತಿದ್ದೇವೆ. ನಾವು ಹಿಂದೆ ಯಾರಿಗೆ ಕೊಟ್ಟಿದ್ದೇವೆ, ಅವರಿಗೆ notice ಕೊಟ್ಟು ನಾವು ಕೇಳುತ್ತಿಲ್ಲ.

ಶ್ರೀ ಸಿ.ಟಿ.ರವಿ:- ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವುದೇನೆಂದರೆ, ನಾವು ಇಲ್ಲಿ ಕಾನೂನು ಶಾಸನ ಮಾಡುತ್ತೇವೆ. ಸುಪ್ರೀಂ ಕೋರ್ಟ್ 1990ಗಿಂತ ಮೊದಲು ಮಾಡಿದ್ದಂಥರ ಬಗ್ಗೆ ಎಲ್ಲವೂ clarification ಮಾಡಿದ ಮೇಲೂ ನಮ್ಮ Special Leave Petition ವಜಾ ಮಾಡಿದೆ. ಈ ಎಲ್ಲವನ್ನೂ ಕೇಳಿದ ಮೇಲೆ, ನಾವು ಇಲ್ಲಿ ಶಾಸನ ಮಾಡಿದ ಮೇಲೆ, ನಾಳೆ ಇದರ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಹೋದರೆ ಊರ್ಜಿತ ಆಗುತ್ತದೆಯೆ? ಎನ್ನುವುದು ನನ್ನ ಮೂಲಭೂತ ಪಶ್ನೆ. ನಮಗೆ ಅವರ ಕಳಕಳಿ, taxpayers' money ಉಳಿಸಬೇಕೆಂಬುದೆಲ್ಲಾ ಅರ್ಥವಾಗುತ್ತದೆ. ನಮ್ಮ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದ ನಂತರ ಈ ಶಾಸನ ಊರ್ಜಿತ ಆಗುತ್ತದೆಯೇ? ಎಂದು ನನ್ನ ಮೂಲಭೂತ ಪ್ರಶ್ನೆ ಇರುವಂಥದ್ದು.

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಉಪಾಧ್ಯಕ್ಷರೆ, ಇದು ಎಲ್ಲಾ hypothetical questions, ಈ ಸದನಕ್ಕೆ, ಈ ರಾಜ್ಯದ ಹಿತದೃಷ್ಟಿಯಿಂದ, ಈ ರಾಜ್ಯದ ಬೊಕ್ಕಸದ ದೃಷ್ಟಿಯಿಂದ ಶಿಕ್ಷಣದಲ್ಲಿ ಗುಣಮಟ್ಟವಿರಬೇಕು, ವಿದ್ಯಾರ್ಥಿಗಳ ದೃಷ್ಟಿಯಿಂದ ಕಾನೂನು ಮಾಡುವ ಅಧಿಕಾರವಿದೆ. ಆ ದಿಕ್ಕಿನಲ್ಲಿ ಈ ಕಾನೂನನ್ನು ತಂದಿದ್ದೇವೆ, ಎಲ್ಲರೂ ಸಹಕರಿಸಿ ಈ ಕಾನೂನಿಗೆ ಒಪ್ಪಿಗೆ ಕೊಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ.

ಉಪಾಧ್ಯಕ್ಷರು: ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

2014ನೇ ಸಾಲಿನ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪಸ್ತಾವದ ಪರವಾಗಿರುವವರು 'ಹೌದು' ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಉಪಾಧ್ಯಕ್ಷರು:- ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಖಂಡ 2 ಮತ್ತು 3

ಉಪಾಧ್ಯಕ್ಷರು:- 2 ಮತ್ತು 3ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು

ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ' ಎಂದು ಸೂಚಿಸಬೇಕು ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ. ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.

2 ಮತ್ತು 3ನೇ ಖಂಡಗಳು ವಿಧೇಯಕದ ಅಂಗವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ

ಉಪಾಧ್ಯಕ್ಷರು:- ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಿರಬೇಕೆಂದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು 'ಹೌದು' ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅ0ಗೀಕರಿಸಲ್ಪಟ್ಟಿದೆ

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಅಂಗೀಕಾರ ಪ್ರಸ್ತಾಪ

ಶ್ರೀ ಆರ್.ವಿ.ದೇಶಪಾಂಡೆ(ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014ನೇ ಸಾಲಿನ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ(ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು 'ಹೌದು' ಎಂದು ಸೂಚಿಸಬೇಕು ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ' ಎಂದು ಸೂಚಿಸಬೇಕು ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು, ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)